# ಮಾರ್ಕನು ಬರೆದ ಸುವಾರ್ತೆ

**ಗ್ರಂಥ ಕರ್ತ:**

ಮಾರ್ಕನು ಬಾರ್ನಬನ ಸಹೋದರನು ಮತ್ತು ಕ್ರಿಸ್ತನ ಸೇವೆಯನ್ನು ಬಾರ್ನಬ, ಪೌಲ ಮತ್ತು ಸಾಂಪ್ರದಾಯಕವಾಗಿ, ಅಪೋಸ್ತಲನಾದ ಪೇತ್ರನೊಂದಿಗೆ ವಿಶೇಶವಾಗಿ ಸೇವೆಮಾಡಿದನು. 1 ಪೇತ್ರ 5:13 ಹೋಲಿಸಿ ನೋಡಿರಿ. ಸಂಭವನೀಯವಾಗಿ (ಬಹುಶಃ) ಈ ಸುವಾರ್ತೆಯಲ್ಲಿ ಬರೆದಿರುವ ಅನೇಕ ಸಂಗತಿಗಳನ್ನು ಪೇತ್ರನಿಂದ ಕಲೆತಿರಬಹುದು. ಮಾರ್ಕನ ಇನ್ನೊಂದು ಹೆಸರು ಯೋಹಾನ (ಅಪೊ 12:12)

**ದಿನಾಂಕ:**

ಕ್ರಿಸ್ತನ ಮರಣ ಮತ್ತು ಪುನುರುತ್ಥಾನ ಆದ ಕೆಲವು ವರ್ಷಗಳ ನಂತರ. ಈ ಸುವಾರ್ತೆಯು ಮೊದಲು ಬರೆಯಲ್ಪಟ್ಟ ಸುವಾರ್ತೆ ಎಂದು ಕೆಲವು ವಿದ್ವಾಂಸರು ನಂಬುತ್ತಾರೆ. ಒಂದು ವೇಳೆ ಇದ್ದರೂ ಇರಬಹುದು ಆದರೆ ನಿಜವಾದ ಪುರಾವೆಯು ನಮ್ಮಲ್ಲಿಲ್ಲ.

**ವಿಷಯ:**

ಮಾರ್ಕನು ಕ್ರಿಸ್ತನನ್ನು ದೇವಕುಮಾರನೆಂದು ಪರಿಚಯಿಸುತ್ತಾನೆ (1:1) ಯಾರು ದೇವರ ಸೇವಕನಾಗಿ ಮತ್ತು ಮನುಷ್ಯಕುಮಾರನಾಗಿ, ಮಾನವರ ಮದ್ಯದಲ್ಲಿ ಅತಿಶಯವಾದ ಕಾರ್ಯಗಳನ್ನು ಮಾಡಿದನು. (ಅಪೊ 10:38; ರೋಮಾ 15:8-9 ಹೋಲಿಸಿರಿ). ಬೇರೆಯವರಿಗೆ ಸೇವೆಮಾಡುವುದೇ ನಿಜವಾದ ಶ್ರೇಷ್ಠತೆ ಎಂದು ಎರಡು ಸಾರಿ ಆತನು ಹೇಳಿದ್ದಾನೆ (9:35; 10:42-45), ಮತ್ತು ಆತನ ಸ್ವಂತ ಜೀವಿತದ ಮೂಲಕ ಇದನ್ನು ಮಾದರಿಯಾಗಿ ತೋರಿಸಿಕೊಟ್ಟಿದ್ದಾನೆ. ಆತನ ಉಪದೇಶಕ್ಕಿಂತಲೂ ಕ್ರಿಸ್ತನ ಕಾರ್ಯಗಳನ್ನು ಮಾರ್ಕನು ಒತ್ತಿ ಹೇಳಿದ್ದಾನೆ. ಉದಾಹರಣೆಗಾಗಿ, ಯೇಸುವು ಮಾಡಿದ 18 ಮಹತ್ಕಾರ್ಯಗಳನ್ನು ಬರೆದಿದ್ದಾನೆ, ಅದರೆ ಆತನ 4 ಸಾಮ್ಯಗಳನ್ನು ಮಾತ್ರ ದಾಖಲಿಸಿದ್ದಾನೆ. (ಮತ್ತಾಯನು 14 ಸಾಮ್ಯಗಳನ್ನು ದಾಖಲಿದ್ದಾನೆ, ಮತ್ತು ಲೂಕನು 15 ಸಾಮ್ಯಗಳನ್ನು), ಮತ್ತು ಪರ್ವತದ ಪ್ರಸಂಗದ ರೀತಿಯ ಉದ್ದವಾದ ಪ್ರಸಂಗಗಳನ್ನು ಅವನು ದಾಖಿಸಲೇ ಇಲ್ಲ.

# 1 1

**1:1** “ಸುವಾರ್ತೆ” ಎಂಬ ಪದವನ್ನು ಗ್ರೀಕ್ ಭಾಷೆಯಿಂದ ಭಾಷಾಂತರ ಮಾಡಲಾಗಿದೆ ಅದರ ಅರ್ಥ “ಶುಭ ಸಂದೇಶ”. ಕರ್ತನಾದ ಯೇಸುಕ್ರಿಸ್ತನ ಶಿಷ್ಯರು ಮತ್ತು ಯೇಸು ತಾನೇ ಇದನ್ನು ಶುಭ ಸಂದೇಶವೆಂದು ಕರೆದರು ಯಾಕಂದರೆ ಅದು ಮಾನವರಿಗೆ ರಕ್ಷಣೆಯ ಮಾರ್ಗವನ್ನು ತೋರಿಸುವ ದೇವರ ಸಂದೇಶವಾಗಿದೆ. “ಯೇಸು” ಮತ್ತು “ಕ್ರಿಸ್ತನು” –ಎಂಬ ಹೆಸರಿನ ಅರ್ಥವನ್ನು ತಿಳಿಯಲು ಮತ್ತಾಯ 1:1 ನೋಡಿರಿ.

*“ಮನುಷ್ಯಕುಮಾರನು”*– ಮತ್ತಾಯ 1:18; 3:16-17; ಯೋಹಾನ 1:18; 3:16; 5:18-23. **2-3**

- **1:2-3** ಮಲಾಕಿ 3:2; ಯೆಶಾಯ 40:3; ಮತ್ತಾಯ 3:3; 11:10. **4**
- **1:4** ಮತ್ತಾಯ 3:1-6; 9:5-7 **5-11**
- **1:5-11** ಮತ್ತಾಯ 3:4-17 **12-13**

**1:12-13** ಮತ್ತಾಯ 4:1-11; ಲೂಕ 4:1-13 ನೋಡಿರಿ. ಮಾರ್ಕನು ಉಲ್ಲೇಕಿಸಿರುವ ಯೇಸುವಿನ ಶೋಧನೆಯ ಈ ಸಂಕ್ಷಿಪ್ತ ವಿವರಣೆಯಲ್ಲಿ ಯಾವ ಸುವಾರ್ತೆಯಲ್ಲಿಯೂ ಉಲ್ಲೇಖಿಸದ ಒಂದು ವಿಷಯವನ್ನು ತಿಳಿಸಿರುತ್ತಾನೆ – ಕಾಡು ಪ್ರಾಣಿಗಳ ಉಪಸ್ಥಿತಿ. ಇದು ತೋರಿಸುವದೇನೆಂದರೆ ಯೇಸುವು ಒಂಟಿಯಾಗಿದ್ದನು ಮತ್ತು ಅಪಾಯಕರವಾದ ಸ್ಥಳದಲ್ಲಿದ್ದನು. **14**

- **1:14** ಮತ್ತಾಯ 14:3. **15**
- **1:15** ಮತ್ತಾಯ 3:2; 4:17. **16-20**
- **1:16-20** ಮತ್ತಾಯ 4:18-22. **21**

**1:21** *“ಕಪೆರ್ನೌಮ್”*– ಮತ್ತಾಯ 4:13. **22**

- **1:22** ಮತ್ತಾಯ 7:28-29. **23**

**1:23** *“ಅಶುದ್ಧ ಆತ್ಮ”*– ಮತ್ತಾಯ 4:24 **24**

**1:24** ಯೇಸು ವ್ಯಕ್ತಿತ್ವದಲ್ಲಿಯೂ ಮತ್ತು ಶಕ್ತಿಯಲ್ಲಿಯೂ ಒಬ್ಬ ಸಂಪೂರ್ಣವಾದ ವಿಶಿಷ್ಟ ವ್ಯಕ್ತಿ ಎಂದು ದೆವ್ವಗಳಿಗೆ ಗೊತ್ತಿತ್ತು.

*“ದೇವರು ಪ್ರತಿಷ್ಠಿಸಿದವನು”*– ಇದನ್ನು ಹೊಸ ಒಡಂಬಡಿಕೆಯಲ್ಲಿ ಲೂಕ 4:34 ಮತ್ತು ಯೋಹಾನ 6:69 ಇಲ್ಲಿ ಮಾತ್ರ ಉಪಯೋಗಿಸಲ್ಪಟ್ಟಿದೆ. ಆದರೆ ಕರ್ತನಾದ ಯೇಸುವಿನ ಸಂಪೂರ್ಣ ಪರಿಶುದ್ಧತೆಯ ಬಗ್ಗೆ ಎಲ್ಲ ಕಡೆಯಲ್ಲಿಯೂ ಪ್ರಮುಖವಾಗಿ ಹೇಳಲ್ಪಟ್ಟಿದೆ. ಲೂಕ 1:35; ಯೋಹಾನ 8:46; 2 ಕೊರಿಂಥ 5:21; ಇಬ್ರಿಯ4:15; 1 ಪೇತ್ರ 2:21-24 ನೋಡಿರಿ. **25**

**1:25** ಎಲ್ಲಾ ಅಶುದ್ಧ ಆತ್ಮಗಳ ಮೇಲೆ ಯೇಸುವಿಗೆ ಸಂಪೂರ್ಣ ಅಧಿಕಾರವಿತ್ತು (ಮತ್ತು ಈಗಲೂ ಇದೆ) (5:1-10; ಲೂಕ 10:17). **27**

**1:27** ಜನರನ್ನು ಆಶ್ಚರ್ಯಗೊಳಿಸಿದ್ದು ಹೊಸ ಬೋಧನೆಯಲ್ಲ, ಆದರೆ ವಾಸ್ತವವಾಗಿ ದೇವರ ಅದ್ಭುತವಾದ ಶಕ್ತಿಯು ಯೇಸುವಿನ ಕಾರ್ಯಗಳನ್ನು ಬೆಂಬಲಿಸಿತ್ತು. ಮತ್ತಾಯ 8:1 ನೋಡಿರಿ. **29-34**

- **1:29-34** ಮತ್ತಾಯ 8:14-17. **34**

**1:34** ವಚನ 25; 3:12; 5:43; ಮತ್ತಾಯ 8:4; 9:30; 12:16. **35**

**1:35** ಯೇಸು ಆಗಾಗ್ಗೆ ಪ್ರಾರ್ಥಿಸಿದನು (ಮತ್ತಾಯ 14:23; 19:13; 26:36,39; ಲೂಕ 5:16; 6:12; 9:29; 22:32; ಯೋಹಾನ 17; ಇಬ್ರಿ 5:7). ಕೆಲವು ಸಾರಿ ಏಕಾಂತ ಸ್ಥಳದಲ್ಲಿ ಪ್ರಾರ್ಥಿಸಲು ಇಚ್ಛಿಸಿದನು. ಆತನು ಮಾನವನಾಗಿ ಮತ್ತು ದೇವರ ವಿಶಿಷ್ಠ ಮಗನಾಗಿ ದೇವರಿಗೆ ಪ್ರಾರ್ಥಿಸಿದನು. ಅಂದರೆ ಆತನ ದೈವತ್ವ ಮತ್ತು ಮಾನವ ಗುಣಗಳು ಆತನ ಪ್ರಾರ್ಥನೆಯಲ್ಲಿ ಅಡಕವಾಗಿತ್ತು. ಯೋಹಾನ 17 ಹೋಲಿಸಿ ನೋಡಿರಿ. **38**

**1:38** ಯೆಶಾಯ 61:1 ನೋಡಿರಿ. ಆತನು ಪರಲೋಕದಿಂದ ಭೂಮಿಗೆ ಏಕೆ ಬಂದನು ಎಂಬ ಹಲವು ಕಾರಣಗಳಲ್ಲಿ ಇದು ಸಹ ಒಂದಾಗಿದೆ. ಬೇರೆ ಕಾರಣಗಳಿಗೆ ಮತ್ತಾಯ 5:17 ಉಲ್ಲೇಖಗಳನ್ನು ನೋಡಿರಿ. **39**

- **1:39** ಮತ್ತಾಯ 4:23 **40**

- **1:40** ಮತ್ತಾಯ 8:1-4 **45**

**1:45** ಯೇಸುವು ನೀಡಿದ ಸ್ವಸ್ಥತೆಗೆ ಕೃತಜ್ಞತೆಯಿಂದ ವಿಧೇಯನಾಗುವ ಬದಲು, ಯೇಸುವು ಹೇಳಿದ ಮಾತಿಗೆ ತದ್ವಿರುದ್ಧವಾಗಿ ಅವನು ಮಾಡಿದನು. ಈ ರೀತಿಯಾಗಿ ಮಾಡಿದವರಲ್ಲಿ

ಇವನು ಕಡೆಯವನೇನಲ್ಲ. ಜನರ ಗುಂಪು ಬಹಳವಾಗಿ ಬೆಳೆಯುತ್ತಿತ್ತು, ಧಾರ್ಮಿಕ ನಾಯಕರ ವಿರೋಧತ್ವವು ಬಹಳ ಶಕ್ತಿಯುತವಾಗಿತ್ತು, ಆದ್ದರಿಂದ ಯೇಸುವು ಯಾವ ಊರೊಳಕ್ಕೂ ಬಹಿರಂಗವಾಗಿ ಹೋಗಲಿಲ್ಲ. ಬಿಕ್ಕಟ್ಟಿನ ಪರಿಸ್ಥಿತಿಯನ್ನುಂಟು ಮಾಡಲು ಯೇಸುವು ಇಚ್ಛಿಸಲಿಲ್ಲ. ಯೋಹಾನ 7:30 ನೋಡಿರಿ.

# 2 1-12

**2:1-12** ಮತ್ತಾಯ 9:1-8 ಟಿಪ್ಪಣಿಯನ್ನು ನೋಡಿರಿ. ಪಾರ್ಶವಾಯು ರೋಗಿಯ ಸ್ನೇಹಿತರು ದೃಢ ನಂಬಿಕೆ ಇದ್ದರೆ ಹೇಗೆ ಎಲ್ಲಾ ತಡೆಗಳನ್ನು ಜೈಸಬಹುದೆಂಬುದಾಗಿ ತೋರಿಸಿಕೊಟ್ಟರೆಂಬುದನ್ನು ಮಾರ್ಕನು ತೋರಿಸುತ್ತಾನೆ. ಇದರ ಮೂಲಕ ಅವರು ನಮ್ಮೆಲ್ಲರಿಗೆ ಮಾದರಿಯಾಗಿದ್ದಾರೆ. ದೃಢನಂಬಿಕೆಯ ವಿಷಯವಾಗಿ ಮತ್ತಾಯ 7:7-8; ಲೂಕ 11:5-10; 18:1-8 ನೋಡಿರಿ. **13-14**

**2:13-14** ಮತ್ತಾಯ 9:9 ನೋಡಿರಿ ಇಲ್ಲಿ ಲೇವಿಯನನ್ನು ಮತ್ತಾಯನೆಂಬುದಾಗಿ ಕರೆಯಲ್ಪಟ್ಟಿದೆ. ಒಂದು ವೇಳೆ ಲೇವಿ ಎಂಬುದು ಅವನ ಮೂಲ ಹೆಸರಾಗಿದ್ದಿರಬಹುದು ಮತ್ತು ಮತ್ತಾಯ ಎಂಬುದು ಅಪೋಸ್ತಲನಾಗಿ ಅವನ ಹೊಸ ಹೆಸರಾಗಿರಬಹುದು. ಮತ್ತಾಯ ಎಂಬುದು ಇಬ್ರಿಯ ಮೂಲದ ಗ್ರೀಕ್ ಭಾಷೆಯ ಹೆಸರಾಗಿದೆ ಅದರ ಅರ್ಥ "ಕರ್ತನ (ಯೆಹೋವನ) ಬಹುಮಾನ". **15-17**

- **2:15-17** ಮತ್ತಾಯ 9:10-13. **18-22**
- **2:18-22** ಮತ್ತಾಯ 9:14-17. **23-28**
- **2:23-28** ಮತ್ತಾಯ 12:1-8 **27**

**2:27** *"ಸಬ್ಬತ್"*– ವಿಮೋ 20:8-11. ಸಬ್ಬತ್ ದಿನವನ್ನು ಪ್ರತಿ ವಾರದಲ್ಲಿ ಒಂದು ವಿಶೇಶ ದಿನವನ್ನಾಗಿ ಕೊಡಲ್ಪಟ್ಟಿತ್ತು ಅಂದು ಎಲ್ಲಾ ಕೆಲಸಗಳಿಂದ ವಿಶ್ರಾಂತಿ ಮತ್ತು ತಮ್ಮ ಸೃಷ್ಟಿಕರ್ತನನ್ನು ಮತ್ತು ಬಿಡುಗಡೆ ಮಾಡಿದಾತನನ್ನು ಆರಾಧಿಸುವ ದಿನವಾಗಿದೆ. ಯೇಸುವಿನ ದಿನಗಳಲ್ಲಿದ್ದ ಅನೇಕ ಧಾರ್ಮಿಕ ನಾಯಕರುಗಳು ಸಬ್ಬತ್ ದಿನದ ಕುರಿತು ತಮ್ಮದೇ ಆದ ನಿಯಮಗಳನ್ನು ಮಾಡಿ ಜನರ ನೀಡಿಕೆಗಳಿಗಿಂತಲೂ ಸಬ್ಬತ್ ದಿನಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟರು. ಮನುಷ್ಯರ ನೀಡಿಕೆಗಳು ದಿನ ಮತ್ತು ನಿಯಮಗಳಿಗಿಂತಲೂ ಮುಖ್ಯವೆಂದು ಯೇಸು ಒತ್ತಿ ಹೇಳಿದನು. ಕೊಲೊ 2:16 ಹೋಲಿಸಿ ನೋಡಿರಿ. **28**

**2:28** *"ಮನುಷ್ಯ ಕುಮಾರನು"*– ಮತ್ತಾಯ 8:20

*"ಕರ್ತನು"*– ಮತ್ತಾಯ 12:8

# 3 1-6

- **3:1-6** ಮತ್ತಾಯ 12:9-14. **5**

**3:5** ಮನುಷ್ಯನು ಮಾಡಿದ ನಿಯಮಗಳನ್ನು ಪಾಲಿಸುವಲ್ಲಿ; ಜನರನ್ನು ಮಣ್ಣಿಗೆ ತುಳಿಯುವದಕ್ಕೂ ಹೇಸದ ಅವರನ್ನು ಯೇಸು ಕಂಡು ಕೋಪಗೊಂಡನು ಮತ್ತು ದುಃಖಿಸಿದನು. ಸಬ್ಬತ್ ದಿನದಲ್ಲಿ ಜನರನ್ನು ವಾಸಿಮಾಡಿದರೆ ಮತ್ತು ಜೀವವನ್ನು ಉಳಿಸಿದರೆ ಕಠಿನ ಹೃದಯವುಳ್ಳವರಾಗಿ ವಿರೋಧಿಸುತ್ತಿದ್ದರು, ಆದರೆ ಸಬ್ಬತ್ ದಿನದಲ್ಲಿ ಒಬ್ಬನನ್ನು ಕೊಲ್ಲುವ ಸಂಚು ಮಾಡುತ್ತಿದ್ದರು. ಈ ದಿನದಲ್ಲೂ ಧಾರ್ಮಿಕ ಜನರ ವರ್ತನೆ ಮತ್ತು ಕ್ರಿಯೆಗಳನ್ನು ನೋಡಿ ಯೇಸು ದುಃಖಿಸುತ್ತಾನೆ ಮತ್ತು ಕೋಪಗೊಳ್ಳುತ್ತಾನೆ. ಪಾಪ ಮತ್ತು ಅನೀತಿಯ ವಿರುದ್ಧವಾಗಿ ದೈವ ಕೋಪವನ್ನು ಗಮನಿಸಿರಿ. ಇಂಥಹ ಕಾರ್ಯಗಳ ವಿರುದ್ಧವಾಗಿ ದೇವರ ಕೋಪದಲ್ಲಿ ಪಾಲ್ಗೊಳ್ಳುವುದು (ಸಂಖ್ಯಾ 25:3). ವಿಮೋ 32:19-20; ಎಫೆ 4:26 ಹೋಲಿಸಿರಿ. **6**

- **3:6** ಮತ್ತಾಯ 12:14.

*"ಹೆರೋದ್ಯರು"*– ಮತ್ತಾಯ 22:16. **8**

**3:8** ಇದೂಮಾಯ ಎಂಬುದು ಯೂದಾಯದ ನೈರುತ್ಯದಲ್ಲಿರುವ ಒಂದು ಪ್ರದೇಶ.

*"ತೂರ್ ಸೀದೋನ್"*– ಮತ್ತಾಯ 11:21. **9**

- **3:9** ಮತ್ತಾಯ 13:2. **11-12**

**3:11-12** 1:24-25,34 ನೋಡಿರಿ. **13-19**

**3:13-19** ಮತ್ತಾಯ 10:1-4 ಟಿಪ್ಪಣಿಯನ್ನು ನೋಡಿರಿ. **17**

**3:17** *"ಗುಡುಗು"*– ಅವರ ಇತ್ಯಾರ್ಥದ ಉದ್ದೇಶವು ಸ್ವಲ್ಪ ಬಿರುಗಾಳಿಯನ್ನುಂಟುಮಾಡುವಂತ್ತಿತ್ತು. ಲೂಕ 9:54 ಹೋಲಿಸಿ ನೋಡಿರಿ. **20**

**3:20** 6:31 ನೋಡಿರಿ. **21**

**3:21** *“ಸ್ನೇಹಿತರು”* – ಇಲ್ಲಿ ಉಪಯೋಗಿಸಿರುವ ಗ್ರೀಕ್ ಪದದ ಅರ್ಥ “ಅವನ ಪಕ್ಕದಲ್ಲಿದ್ದವರು”, ಅಂದರೆ ಅವನಿಗೆ ಸಂಬಂಧಪಟ್ಟವರು. ಇದು ಒಂದು ವೇಳೆ ಅವನ ಕುಟುಂಬ ಅಥವ ಅವನ ಸಂಬಂಧಿಕರನ್ನು ಸೂಚಿಸಿರಬಹುದು.

*“ಅವನ ಮನಸ್ಸಿನಿಂದ”*– ಯೋಹಾನ 10:20 ಹೋಲಿಸಿರಿ. ದೇವರಿಗಾಗಿ ಅವನ ಉತ್ಸಾಹ ಬಹಳವಾಗಿತ್ತು, ಜನರಿಗೆ ಬೋಧಿಸಲು ಮತ್ತು ಸಹಾಯ ಮಾಡಲು ಆತನ ಆಸಕ್ತಿ ಬಲವಾಗಿತ್ತು, ಹೇಗೆಂದರೆ ಕೆಲವು ಸಾರಿ ತಾವು ಎಂದಿಗೂ ಅನುಭವಿಸಲಾರದ ಸಂಗತಿಗಳನ್ನು ಕಂಡ ಸಾಧಾರಣ ಜನರಿಗೆ ಅವನು ಅಸಹಜವಾಗಿ ಕಂಡನು. ಯೋಹಾನ 2:13-17 ಹೋಲಿಸಿರಿ. ಇದೇ ಕಾರಣಕ್ಕಾಗಿ ಎಲ್ಲಾ ಶತಮಾನಗಳಲ್ಲಿಯೂ ಸಹ ಆತನ ಕೆಲವು ಹಿಂಬಾಲಕರು ಹುಚ್ಚರಾಗಿ ಅಥವಾ ಅಸಹಜವಾದ ವ್ಯಕ್ತಿಗಳಾಗಿ ಪರಿಗಣಿಸಲ್ಪಟ್ಟರು. ಅಪೊ 26:24 ನೋಡಿರಿ. **22-29**

**- 3:22-29** ಮತ್ತಾಯ 12:25-32. **22**

**3:22** ಯೆಹೂದ್ಯರ ಧಾರ್ಮಿಕ ನಾಯಕರುಗಳು ಯೇಸುವಿನ ಬೋಧನೆ ಮತ್ತು ಆತನ ನಡವಳಿಕೆಯ ಬಗ್ಗೆ ಬೇರೆ ರೀತಿಯ ವಿವರಣೆಯನ್ನು ಹೊಂದಿದ್ದರು. ಆತನು ಸೈತಾನನ ನಿಯಂತ್ರಣದಲ್ಲಿದ್ದಾನೆ ಎಂದು ಅವರು ಹೇಳಿದರು.

*“ಬೆಲ್ಜೆಬೂಲನು”*– ಮತ್ತಾಯ 10:25 ರ ಟಿಪ್ಪಣಿ. ಯೇಸುವಿನ ವಿಷಯವಾಗಿ ಏನನ್ನು ನಂಬಬೇಕೆಂದು ಪ್ರತಿಯೊಬ್ಬರು ತೀರ್ಮಾನಿಸಬೇಕು. ಯೇಸು ಹುಚ್ಚನಾಗಲಿ ಅಥವಾ ದೆವ್ವಗಳಿಂದ ಹಿಡಿಯಲ್ಪಟ್ಟವನು ಅಥವಾ ಮೋಸಗಾರನು ಅಥವಾ ಬೇರೇನು ಆಗಿರಲಿಲ್ಲ. ಆತನು ದೇವರಿಂದ ಬಂದವನು ಮತ್ತು ಸತ್ಯವನ್ನೇ ಮಾತಾಡಿದನು ಮತ್ತು ದೇವರ ಕೆಲಸಗಳನ್ನು ಮಾಡಿದನು. ಎಲ್ಲಾ ಪುರಾವೆಗಳು ಆತನು ದೇವರಿಂದ ಬಂದವನೆಂದು ಹೇಳುತ್ತವೆ. **30**

**3:30** ವಚನ 22; ಯೋಹಾನ 7:20; 8:48,52; 10:20. **31-35**

**- 3:31-35** ಮತ್ತಾಯ 12:46-50

# 4 1-20

**4:1-20** ಮತ್ತಾಯ 13:1-23. ಮತ್ತಾಯನಿಗಿಂತಲೂ ಮಾರ್ಕನು ಅದೇ

ಸತ್ಯಾಂಶವನ್ನು ತಿಳಿಸಲು ಸ್ವಲ್ಪ ಬಿನ್ನವಾಗಿ ದಾಖಲಿಸಿದ್ದಾನೆ. ವ.11 ಅವನು “ದೇವರ ರಾಜ್ಯ” ಎಂಬ ಪದಗಳನ್ನು ಉಪಯೋಗಿಸಿದ್ದಾನೆ ಆದರೆ ಮತ್ತಾಯನು “ಪರಲೋಕ ರಾಜ್ಯ” ಎಂಬುದಾಗಿ ಉಪಯೋಗಿಸಿದ್ದಾನೆ. ಸ್ಪಷ್ಟವಾಗಿ ನೋಡುವುದಾದರೆ ಈ ಎರಡು ಪದಗಳು ಒಂದೇ ಅರ್ಥವನ್ನು ಕೊಡುತ್ತದೆ. ಈ ರಾಜ್ಯದ ವಿಷಯವಾಗಿ ಮತ್ತಾಯ 4:17 ಟಿಪ್ಪಣಿಯನ್ನು ನೋಡಿರಿ. “ಇಲ್ಲದಿದ್ದರೆ, ಅವರು ತಿರುಗಿಕೊಂಡು ಕ್ಷಮಿಸಲ್ಪಡುವರು” ಎಂಬುದಾಗಿ ಮಾರ್ಕನು ಮತ್ತಾಯನ ದಾಖಲೆ ಮತ್ತಾಯ 13:13 ಸೇರಿಸುತ್ತಾನೆ ಆದರೆ 14,15 ವಚನಗಳನ್ನು ಬಿಟ್ಟುಬಿಟ್ಟಿದ್ದಾನೆ. ಮತ್ತು ಮಾರ್ಕ 4:13 ಮತ್ತಾಯನ ಸುವಾರ್ತೆಯಲ್ಲಿ ಕಾಣುವದಿಲ್ಲ. ವ.19 “ಇತರ ವಿಷಯಗಳ ಮೇಲಣ ಆಶೆ” ಎಂಬ ಮಾರ್ಕನ ಮಾತುಗಳನ್ನು ಮತ್ತಾಯ 13:22 ಕಾಣುವದಿಲ್ಲ. ಪ್ರಪಂಚದ ವಸ್ತುಗಳ ಮೇಲಣ ಆಶೆಗಳು, ಒಳ್ಳೆಯದೋ ಅಥವಾ ಕೆಟ್ಟದ್ದೋ, ಅವು ನಮ್ಮ ಜೀವಿತದಲ್ಲಿ ಚಿಂತೆಗಳೂ ಐಶ್ವರ್ಯದಿಂದುಂಟಾಗುವ ಮೋಸದಂತೆ ದೇವರ ವಾಕ್ಯದ ಪ್ರಭಾವವನ್ನು ಅಡಗಿಸುವ ಶಕ್ತಿಯಾಗಬಹುದು. 1 ಯೋಹಾನ 2:16; ಕೊಲೊ 3:1-2 ಹೋಲಿಸಿರಿ. ಈ ಸಾಮ್ಯದ ವಿಷಯವಾಗಿ ಲೂಕನು ಸ್ವಲ್ಪ ವ್ಯತ್ಯಾಸವಾಗಿ ದಾಖಲಿಸಿದ್ದಾನೆ (ಲೂಕ 8:4-15 ನೋಡಿರಿ). ಪದ ಉಪಯೋಗಗಳಲ್ಲಿ ವ್ಯತ್ಯಾಸ ಕಂಡುಬಂದಿರುವಾಗ ಯಾವ ಲೇಖಕನು ನಿಖರವಾಗಿ ದಾಖಲಿಸಿದ್ದಾನೆ? ಇದಕ್ಕೆ ಉತ್ತರ, ಈ ಮೂವರು. ಒಂದು ವೇಳೆ ಯೇಸು ಇವರೆಲ್ಲರೂ ದಾಖಲಿಸಿದ್ದಕ್ಕಿಂತಲೂ, ಹೇಳಿರುವುದಕ್ಕಿಂತಲೂ ಇನ್ನು ಅನೇಕ ಮಾತುಗಳನ್ನಾಡಿರಬಹುದು. ಸುವಾರ್ತೆಯ ಉದ್ದೇಶ ಮತ್ತು ಮಹತ್ವಗಳಿಗೆ ದಕ್ಕೆ ಬರದಂತೆ ಯಾವ ಪದಗಳನ್ನು ಅಥವಾ ವಾಕ್ಯಗಳನ್ನು ಉಪಯೋಗಿಸಬೇಕೆಂದು, ಈ ಮೂರು ಜನರನ್ನು ದೇವರಾತ್ಮನು ನಡೆಸಿದನು. ಸುವಾರ್ತೆಯಲ್ಲಿ ಯೇಸುವಿನ ಮಾತುಗಳನ್ನು ಮತ್ತು ಕೆಲಸಗಳನ್ನು ದಾಖಲಿಸಲು ಲೇಖಕರು ಉಪಯೋಗಿಸಿದ ಭಾಷೆಯ ಎಲ್ಲಾ ವ್ಯತ್ಯಾಸಗಳು ನಿಜವಾಗಿದೆ. **21-22**

**4:21-22** ಈ ವಚನಗಳು ಮತ್ತಾಯ 13ನೇ ಅಧ್ಯಾಯದಲ್ಲಿ ಕಾಣಿಸುವುದಿಲ್ಲ, ಆದರೆ ಇದಕ್ಕೆ ಹೋಲುವ ಪದಗಳನ್ನು ಸುವಾರ್ತೆಯ ಅನೇಕ ಕಡೆಗಳಲ್ಲಿ ಕಾಣಬಹುದಾಗಿದೆ. ಮತ್ತಾಯ 5:15; 10:26. **23**

- **4:23** ಮತ್ತಾಯ 13:9. **24**

- **4:24** ಮತ್ತಾಯ 7:2. **25**

- **4:25** ಮತ್ತಾಯ 13:12; 25:29. **26-29**

**4:26-29** ಈ ಸಾಮ್ಯವನ್ನು ಮಾರ್ಕನ ಸುವಾರ್ತೆಯಲ್ಲಿ ಮಾತ್ರ ಕಾಣಬಹುದು. ಅಕ್ಷರಶಃ ಹೇಳಬೇಕೆಂದರೆ, ಒಂದು ಒಳ್ಳೆಯ ಬೀಜವನ್ನು ಒಳ್ಳೆಯ ಭೂಮಿಯಲ್ಲಿ ನೆಡಲ್ಪಟ್ಟಾಗ ಖಂಡಿತವಾಗಿ ಅದು ಮೊಳೆತು ಒಳ್ಳೆಯ ಗಿಡವಾಗಿ ಬೆಳೆಯುತ್ತದೆ. ಬಿತ್ತುವವನಿಗೆ ಅದರ ಪ್ರಕ್ರಿಯು ಅರ್ಥವಾಗದಿದ್ದರೂ ಅದರ ಬೆಳವಣಿಗೆಗೆ ಕುಂದು ಬರುವದಿಲ್ಲ. ಬೆಳವಣಿಗೆಯು ನಿಧಾನವಾಗಿರಬಹುದು, ಆದರೆ ಅದು ಸ್ವಾಭಾವಿಕವಾದದ್ದು, ಸ್ವಯಂಚಾಲಿತವಾದದ್ದು. ದೇವರ ರಾಜ್ಯದ ವಿಷಯದಲ್ಲಿಯೂ ಸಹ ಇದು ನಿಜವಾಗಿದೆ, ವಯಕ್ತಿಕವಾದ ಜೀವಿತಗಳಲ್ಲಿ ಅಥವಾ ಇಡೀ ಭೂಮಂಡಲದಲ್ಲಿ ಆರಂಭದಿಂದ ಸುಗ್ಗಿಯವರೆಗೂ. ಮನುಷ್ಯರ ಮನಸ್ಸು ಮತ್ತು ಹೃದಯಗಳಲ್ಲಿ ಬಿತ್ತಲ್ಪಡುವ ದೇವರ ವಾಕ್ಯವು ಜೀವಿಸುವ ಶಕ್ತಿಯುತವಾದ ಬೀಜವಾಗಿದೆ. ಇದು ಹೇಗೆ ಎಂದು ಮನುಷ್ಯರು ಅರ್ಥಮಾಡಿಕೊಳ್ಳಲಾಗದಿರಬಹುದು ಅಥವಾ ನೋಡಲಾಗದಿರಬಹುದು ಅಥವಾ ಅದನ್ನು ನಿಯಂತ್ರಿಸಲಾಗದಿರಬಹುದು, ಆದರೆ ಅದು ಮೊಳೆತು ಬೆಳವಣಿಗೆ ಹೊಂದಿ ಫಲವನ್ನು ಕೊಡುತ್ತದೆ. 1 ಕೊರಿಂಥ 3:6-7; 1 ಪೇತ್ರ 1:23-25 ಹೋಲಿಸಿರಿ. ಸುವಾರ್ತೆಯನ್ನು ಸಾರುವವರಿಗೆ, ದೇವರ ವಾಕ್ಯವನ್ನು ಬೋಧಿಸುವವರಿಗೆ ಇದು ಉತ್ಸಾಹವನ್ನು ಉಂಟುಮಾಡುವಂಥದ್ದಾಗಿದೆ. ದೇವರ ವಾಕ್ಯದ ಶಕ್ತಿಯಲ್ಲಿ ಮತ್ತು ದೇವರ ಕೆಲಸದ ಬಗ್ಗೆ ಅತಿಯಾದ ಭರವಸೆಯನ್ನು ಹೊಂದಿರಬೇಕು. ಆದರೆ, ಸ್ವಾಭಾವಿಕ ಬೆಳವಣಿಗೆಯಾಗುತ್ತದೆಂದು ನೆನೆಸಿ ದೇವರ ವಾಕ್ಯವನ್ನು ಬೇಜವಾಬ್ದಾರಿಯಾಗಿ ಕೇಳಿಸಿಕೊಳ್ಳದಿರಲು ಕಾರಣವಾಗಬಾರದು. ವ. 23,24 ನೋಡಿರಿ. **29**

**4:29** *"ಸುಗ್ಗಿ"*– ಮತ್ತಾಯ 3:12; 13:30; ಪ್ರಕ 14:14-16 ಹೋಲಿಸಿರಿ. **30-32**

- **4:30-32** ಮತ್ತಾಯ 13:31-32. **33**

**4:33** ಕೆಲವು ಸಂಗತಿಗಳನ್ನು ಶಿಷ್ಯರು ಗ್ರಹಿಸಲಿಲ್ಲ. ಯೋಹಾನ 16:12 ನ್ನು ಹೋಲಿಸಿರಿ. ಯೇಸು ತನ್ನ ಎಲ್ಲಾ ಬೋಧನೆಗಳಲ್ಲಿ, ಸಾಮ್ಯ ಮತ್ತು ದೃಷ್ಟಾಂತಗಳನ್ನು ಉಪಯೋಗಿಸಿದನು. ಆತನು ಇನ್ನು ಅನೇಕ ವಿಧಾನಗಳನ್ನು ಉಪಯೋಗಿಸಿರಬಹುದು ಆದರೆ ಅವುಗಳನ್ನು ಸತ್ಯವೇದದಲ್ಲಿ ದಾಖಲಿಸಿಲ್ಲ. ಯೋಹಾನ 20:30; 21:25 ಹೋಲಿಸಿ. **34**

**4:34** ಉದಾಹರಣೆಗಾಗಿ 13-20 ವಚನಗಳಲ್ಲಿ ಯೇಸುವು ಕೊಟ್ಟ ವಿವರಣೆಗಳಲ್ಲಿ

ಒಂದನ್ನು ಕಾಣಬಹುದು. ಮತ್ತಾಯ 13:36-43 ಮತ್ತೊಂದು ಉದಾಹರಣೆ. **35-41**

**- 4:35-41** ಮತ್ತಾಯ 8:23-27.

# 5 1-20

**5:1-20** ಇದು ಮತ್ತಾಯ 8:28-34 ರಲ್ಲಿ ದಾಖಲಿಸಿರುವ ಸಂಪೂರ್ಣ ದಾಖಲೆಯಾಗಿದೆ. ಅಲ್ಲಿ ದೆವ್ವದಿಂದ ಹಿಡಿಯಲ್ಪಟ್ಟ ಇಬ್ಬರು ವ್ಯಕ್ತಿಗಳಿದ್ದರು ಎಂದು ಮತ್ತಾಯನು ಹೇಳುತ್ತಾನೆ. ಮಾರ್ಕನು ಒಂದು ವಿಷೇಶ ಕಾರಣಕ್ಕಾಗಿ ಒಬ್ಬನ್ನನ್ನು ಮಾತ್ರ ತೋರಿಸಿ ಇನ್ನೊಬ್ಬನ ವಿಷಯವಾಗಿ ಉಲ್ಲೇಖಿಸಿಲ್ಲ. **2**

**5:2** ದೆವ್ವಗಳಿಂದ ಹಿಡಿಯಲ್ಪಟ್ಟವನ ವಿಷಯವಾಗಿ ಮತ್ತಾಯ 4:24 ರ ಟಿಪ್ಪಣಿ. **3-5**

**5:3-5** ದೆವ್ವಗಳ ನಿಯಂತ್ರಣದಲ್ಲಿರುವವರಿಗೆ ದೆವ್ವಗಳು ಏನೆಲ್ಲಾ ಮಾಡಬಹುದು ಎಂಬ ವಿಷಯವಾಗಿ ಎದ್ದುಕಾಣುವ ವಿವರಣೆಯಾಗಿದೆ. ಈ ಮನುಷ್ಯನ ಹಿಂಸಾತ್ಮಕ ನಡವಳಿಕೆ ಮತ್ತು ಬಲವು ತೋರಿಸುವದೇನೆಂದರೆ ಅವನು ಅನೇಕ ದೆವ್ವಗಳಿಂದ ಹಿಡಿಯಲ್ಪಟ್ಟಿದ್ದನು (ವ.9). **7**

**5:7** ದೆವ್ವಗಳಿಗೆ ಯೇಸು ಯಾರೆಂದು ಗೊತ್ತಿದೆ ಎಂದು ತಿಳಿಯುತ್ತದೆ – 1:24,34. **9**

**5:9** ದಂಡು ಎಂಬುವದು ರೋಮಾಯ ಸೇನೆಯಲ್ಲಿ ಮೂರು ಸಾವಿರದಿಂದ ಆರು ಸಾವಿರ ಸೈನಿಕರು. ಆದರೂ ವಚನಗಳು 2 ಮತ್ತು 8ರಲ್ಲಿ ಒಂದೇ ಒಂದು ದುರಾತ್ಮವಿರುವದನ್ನು ಕಾಣುತ್ತೇವೆ. ಒಂದು ವೇಳೆ ಇದು ಆ ಮನುಷ್ಯನಲ್ಲಿದ್ದ ದಂಡಿನ ನಾಯಕನಾಗಿರಬಹುದು, “ಸೈನ್ಯಾಧಿಪತಿ” (ಸೈನ್ಯಾಧಿಕಾರಿ), ಮತ್ತು ಯೇಸು ಪ್ರಧಾನವಾಗಿ ಅದರೊಂದಿಗೆ ವ್ಯವಹರಿಸಿದನು. **10**

**5:10** ಲೂಕ 8:31 ಹೋಲಿಸಿರಿ. **15**

**5:15** ಯೇಸುವು ಅದ್ಭುತವಾದ ಶಕ್ತಿಯನ್ನು ಪ್ರದರ್ಶಿಸಿದನು ಎಂದು ಅವರಿಗೆ ಅರಿವಾಯಿತು, ಆದರೆ ಅವರಿಗೆ ಆತನು ಯಾರೆಂದು ಮತ್ತು ಆತನ ಉದ್ದೇಶವೇನೆಂದು ಅರ್ಥವಾಗಲಿಲ್ಲ - ಮತ್ತು ದುಃಖದ ಸಂಗತಿ ಏನೆಂದರೆ ಅವರು ಆತನನ್ನು ಅರ್ಥಮಾಡಿಕೊಳ್ಳಲು ಇಚ್ಛಿಸಲಿಲ್ಲ (ವ.17). **19**

**5:19** *"ಅವರಿಗೆ ಹೇಳು"*– ಯೇಸುವಿನ ಈ ಆದೇಶಗಳನ್ನು ಬೇರೆಯವರೊಂದಿಗೆ ಹೋಲಿಸಿರಿ (1:44; 3:12). ಆದರೆ ಗೆರಸೇನ ಸೀಮೆಯ ಸನ್ನಿವೇಶ (ವ.1) ಇಸ್ರಾಯೇಲ್ ಪ್ರದೇಶದವರಿಗಿಂತಲೂ ಬೇರೆಯೇ ಆಗಿತ್ತು. ಗೆರಸೇನದವರು ಯೆಹೂದ್ಯರಾಗಿರಲಿಲ್ಲ, ಅವರು ಮೆಸ್ಸೀಯನ ನಿರೀಕ್ಷೆಯಲ್ಲಿರಲಿಲ್ಲ, ಮತ್ತು ಯೇಸು ಅಪರೂಪವಾಗಿ ಅಲ್ಲಿಗೆ ಬರುತ್ತಿದ್ದನು. ಅಲ್ಲಿಯ ಜನರ ಗುಂಪಿನಿಂದ ಆತನ ಸೇವೆಗೆ ಯಾವ ಅಡ್ಡಿಯಿರಲಿಲ್ಲ. ಈಗ ಯೇಸುವು ಆ ಮನುಷ್ಯನಿಗೆ ನುಡಿದ ಈ ಮಾತುಗಳು ಕರ್ತನು ತಮ್ಮ ಜೀವಿತದಲ್ಲಿ ಕಾರ್ಯಮಾಡಿರುವ ಎಲ್ಲರಿಗೂ ಅನ್ವಯಿಸುತ್ತದೆ. **20**

**5:20** ದೆಕಪೊಲಿ ಇದು ಗ್ರೀಕ್ ಭಾಷೆಯ ಹೆಸರು ಅದರ ಅರ್ಥ ಹತ್ತು ಪಟ್ಟಣಗಳು. ಗೆರೆಸೇನದ ಒಂದು ಪ್ರದೇಶವು ದೆಕಪೊಲಿಗೆ ಸೇರಿದ ಒಂದು ಸೀಮೆಯಾಗಿತ್ತು. **21**

**5:21** ಆತನು ಗಲಿಲಾಯ ಸಮುದ್ರದ ಪಶ್ಚಿಮ ಭಾಗಕ್ಕೆ ಹಿಂತಿರುಗಿದನು. **22-43**

**5:22-43** ಮತ್ತಾಯ 9:18-25 ರಲ್ಲಿ ಸಂಕ್ಷಿಪ್ತವಾಗಿ ದಾಖಲಿಸಿರುವ ಘಟನೆಗಳ ಸವಿಸ್ತಾರವಾದ ದಾಖಲೆ. **25**

**5:25** ವಚನ 42. ಯಾಯೀರನ ಮಗಳ ಜೀವಿತ ಕಾಲದವರೆಗೂ ಆಕೆ ಬಳಲುತ್ತಿದ್ದಳು. **26**

**5:26** ಆಕೆಯ ಕಾಯಿಲೆಯು ಆ ಕಾಲದ ವೈದ್ಯರಿಗೂ ಮತ್ತು ಔಷದಗಳ ಸಾಮರ್ಥ್ಯಕ್ಕೂ ಮೀರಿದ ಕಾಯಿಲೆಯಾಗಿತ್ತು. ಆದರೆ ಆಕೆಯ ನಂಬಿಕೆಯು ವೈದ್ಯರಿಗಿಂತಲೂ ಹೆಚ್ಚಿನವನು ಮತ್ತು ಮಾನವ ಪರಿಹಾರಕನ ಬಳಿಗೆ ಕರೆತಂದಿತ್ತು. ವಿಮೋ 15:26; ಕೀರ್ತನೆ 103:3 ಹೋಲಿಸಿ. **30**

**5:30** ಲೂಕ 8:46. ಆತನಲ್ಲಿ ನಂಬಿಕೆಯಿಟ್ಟಿರುವವರ ಕೊರತೆಗಳನ್ನು ನೀಗಿಸಲು ದೇವರ ಶಕ್ತಿಯು ಕರ್ತನಾದ ಯೇಸುವಿನ ಮೂಲಕ ಹರಿಯುತ್ತದೆ. ಆ ಹೆಂಗಸು ತನ್ನ ನಂಬಿಕೆಯನ್ನು ಬಚ್ಚಿಡುವುದು ಆತನಿಗೆ ಇಷ್ಟವಿರಲಿಲ್ಲ, ಆದರೆ ಬಹಿರಂಗವಾಗಿ ಆಕೆಯು ಒಪ್ಪಿಕೊಳ್ಳಬೇಕೆಂದು ಇಚ್ಚಿಸಿದನು ಮತ್ತು ಆಕೆಯನ್ನು ಆಶೀರ್ವಧಿಸಿದನು (ವ.34) **34**

**5:34** ಮತ್ತಾಯ 9:22. ಯೇಸುವು ಈ ಲೋಕಕ್ಕೆ ಬಂದ ಒಂದು ಕಾರಣ ನೊಂದ ಹೃದಯಗಳಿಗೆ ಸಮಾಧಾನ ಕೊಡುವುದಾಗಿದೆ – ಲೂಕ 2:14; ಯೋಹಾನ 14:1,27; 20:19. **35**

**5:35** ಅವರು ತಮ್ಮ ನಂಬಿಕೆಯನ್ನು ಕೈಬಿಡಬೇಕೆಂದಿದ್ದರು ಮತ್ತು ಯಾಯೀರನನ್ನೂ ಹಾಗೆ ಮಾಡಲು ಪ್ರೇರೇಪಿಸಿದರು. ಒಬ್ಬ ವ್ಯಕ್ತಿಯ ಸಾವಿನ ಮೇಲೂ ಯೇಸುಕ್ರಿಸ್ತನಿಗೆ ಅಧಿಕಾರವಿದೆಯೆಂಬುದು ಅವರಿಗೆ ತಿಳಿದಿರಲಿಲ್ಲ. ಆತನಿಗೆ ಮರಣದಿಂದ ಎಬ್ಬಿಸುವುದು, ಅಸ್ವಸ್ಥರನ್ನು ಮತ್ತು ಸಾಯುತ್ತಿರುವವರನ್ನು ಸ್ವಸ್ಥಪಡಿಸುವಷ್ಟೇ ಸುಲಭದ ಕಾರ್ಯವಾಗಿತ್ತು. **36**

**5:36** ವಿಶ್ವಾಸಿಗಳು ತಮ್ಮ ಜೀವನದ ಎಲ್ಲಾ ಅನುಭವಗಳನ್ನು ಬರೆದಿಡಬೇಕಾದ ಮಾತುಗಳು ಇಲ್ಲಿವೆ. ಭಯವನ್ನು ವಿರೋಧಿಸದಿದ್ದರೆ ಅದು ನಂಬಿಕೆಯನ್ನು ಬಲಹೀನಗೊಳಿಸುತ್ತದೆ ಅಥವಾ ಸಂಪೂರ್ಣವಾಗಿ ನಾಶಮಾಡಿಬಿಡುತ್ತದೆ; ನಂಬಿಕೆಯನ್ನು ಅಭ್ಯಾಸ ಮಾಡಿಕೊಂಡರೆ ಅದು ಭಯವನ್ನು ನೀಗಿಸುತ್ತದೆ. **39-40**

- **5:39-40** ಮತ್ತಾಯ 9:24. **41**

**5:41** ಯೇಸು ಅರಾಮಿಕ್ ಭಾಷೆಯನ್ನು ಮಾತಾಡುತ್ತಿದ್ದನು, ಇದು ಇಬ್ರಿಯ ಭಾಷೆಗೆ ಹೋಲುವ ಮತ್ತು ಆಕಾಲದಲ್ಲಿ ಅಲ್ಲಿನ ಜನರು ಸಾಧಾರಣವಾಗಿ ಉಪಯೋಗಿಸುತ್ತಿದ್ದ ಭಾಷೆಯಾಗಿತ್ತು. **43**

- **5:43** 1:44; 7:36; ಮತ್ತಾಯ 8:4 ನೋಡಿರಿ.

# 6 1-5

**6:1-5** ಮತ್ತಾಯ 13:54-58. ಯೇಸುವಿನ ಸ್ವಂತ ಊರು ನಜರೇತ್. **5**

**6:5** ಕರ್ತನಾದ ಯೇಸುವು ಮಾಡಬೇಕೆಂದಿರುವ ಎಲ್ಲಾ ಒಳ್ಳೆಕಾರ್ಯಗಳನ್ನು ಮನುಷ್ಯನ ಅಪನಂಬಿಕೆಯು ಅಸಾಧ್ಯವಾಗಿಸುತ್ತದೆ. ಕೊರತೆಯು ಆತನಲಿಲ್ಲ ಆದರೆ ಅವರಲ್ಲಿದೆ. ದೇವರು ತನ್ನ ವಿಶೇಶ ಆಶೀರ್ವಾದಗಳನ್ನು ಹೊಂದಿಕೊಳ್ಳಲು ನಂಬಿಕೆಯ ಮಾರ್ಗವನ್ನು ಒದಗಿಸಿದ್ದಾನೆ. (9:23; ಮತ್ತಾಯ 9:22,29; 21:21-22; ಯೋಹಾನ 11:40). ಕೀರ್ತನೆ 78:41 ರ ಟಿಪ್ಪಣಿಯನ್ನು ನೋಡಿರಿ. **6**

**6:6** *"ಆಶ್ಚರ್ಯಪಟ್ಟನು"*– ಮತ್ತಾಯ 8:10 ಹೋಲಿಸಿ ರಿ – ಇದು ಯೇಸು ಆಶ್ಚರ್ಯಪಟ್ಟ ಒಂದೇ ಒಂದು ಸಮಯವಾಗಿದೆ. **7-11**

- **6:7-11** ಮತ್ತಾಯ 10:1,9-14. **12**

**6:12** ಪಶ್ಚಾತ್ತಾಪವು ಅವರ ಪ್ರಸಂಗದ ಪ್ರಧಾನ ಸಂದೇಶವಾಗಿರುವದನ್ನು ಗಮನಿಸಿ. ಮತ್ತಾಯ 3:2; 4:17 ಟಿಪ್ಪಣಿಯನ್ನು ನೋಡಿರಿ. **13**

- **6:13** ಯಾಕೋಬ 5:14. **14-29**

- **6:14-29** ಮತ್ತಾಯ 14:1-12. **15**

**6:15** *"ಎಲೀಯ"*– ಮಲಾಕಿ 4:5; ಮತ್ತಾಯ 11:14; 17:10; ಯೋಹಾನ 1:19-23. **20**

**6:20** ಹೆರೋದನು ಬಲಹೀನ ವ್ಯಕ್ತಿಯಾಗಿದ್ದನು, ಭಯ ಮತ್ತು ವಿಸ್ಮಯದಿಂದ ಪರಿಗಣಿಸುತ್ತಿದ್ದ ಈ ವ್ಯಕ್ತಿಯ ಬಗ್ಗೆ ಏನು ಮಾಡಬೇಕೆಂದು ಅವನಿಗೆ ಗೊತ್ತಿರಲಿಲ್ಲ. **30-34**

- **6:30-34** ಮತ್ತಾಯ 14:13-21. **30**

**6:30** ಇದು 7-13 ವಚನಗಳನ್ನು ಹಿಂತಿರುಗಿ ನೋಡುತ್ತದೆ. **31**

**6:31** 3:20 ನೋಡಿರಿ. **34**

- **6:34** ಮತ್ತಾಯ 9:36. **37**

**6:37** *"ಇನ್ನೂರು ಬೆಳ್ಳಿ ನಾಣ್ಯ"*– ಗ್ರೀಕ್ ಭಾಷೆಯಲ್ಲಿ "ಇನ್ನೂರು ದಿನಾರಿಯ". ಒಂದು ದಿನಾರಿಯ ಒಬ್ಬನ ಒಂದು ದಿನದ ಕೂಲಿಯಾಗಿತ್ತು. (ಯೋಹಾನ 6:7). **45-56**

- **6:45-56** ಮತ್ತಾಯ 14:22-36.

# 7 1-23

- **7:1-23** ಮತ್ತಾಯ 15:1-20 **19**

**7:19** *"ತಿನ್ನುವ ಪದಾರ್ಥಗಳೆಲ್ಲಾ ಶುದ್ಧ"*– ಅಪೊ 10:9-16 ನೋಡಿರಿ. ಶುದ್ಧ ಮತ್ತು ಅಶುದ್ಧ ಪದಾರ್ಥಗಳ ಹಳೆಯ ಒಡಂಬಡಿಕೆಯ ನಿಯಮವು ಆತ್ಮೀಕ ಪಾಠಗಳನ್ನು ಕಲಿಸುವುದಕ್ಕಾಗಿ ಮಾಡಲಾಗಿತ್ತು. ಈಗ ಕಾಲವು ಬದಲಾಗಿ ಲಿಖಿತ ನಿಮಗಳನ್ನು ಬದಿಗಿಟ್ಟು ಆತ್ಮೀಕ ಪಾಠಗಳನ್ನು ಕಲಿಯಬೇಕಾಗಿದೆ. ಯಾಜಕಕಾಂಡ 11ನೇ ಅಧ್ಯಾಯದ ಟಿಪ್ಪಣಿ. **24**

**7:24** ಮತ್ತಾಯ 15:21-28 ನೋಡಿರಿ. ಸಿರಿಯಾದ ಫೊಯಿನಿಸಿಯಾ ಭೂ ಪ್ರದೇಶವು ಮಡಿಟರೇನಿಯನ್ ಸಮುದ್ರದ ಇಸ್ರಾಯೇಲಿನ ಸ್ವಲ್ಪ ಉತ್ತರ ಭಾಗದಲ್ಲಿತ್ತು. ಆ ಕಾಲದಲ್ಲಿ

ಅದು ಸಿರಿಯರ ಅಧೀನದಲ್ಲಿತ್ತು. ಯೆಹೂದ್ಯರು ಅಲ್ಲಿಯ ಜನರನ್ನು ಕಾನಾನ್ಯರೆಂದು ಕರೆಯುತ್ತಿದ್ದರು. **29**

**7:29 –** ಆಕೆಯ ಉತ್ತರವು ಯೇಸುವಿನ ಮೇಲಿರುವ ನಂಬಿಕೆಯನ್ನು ಆದರಿಸಿತ್ತು (ಮತ್ತಾಯ 15:28). **31**

**7:31** ಸೀದೋನ್ ಪಟ್ಟಣವು ತೂರ್ ಪಟ್ಟಣದ ಉತ್ತರ ದಿಕ್ಕಿನಲ್ಲಿದ್ದ ಒಂದು ಮುಖ್ಯವಾದ ಪಟ್ಟಣ. ಯೇಸು ಮೊದಲು ಉತ್ತರ ದಿಕ್ಕಿಗೆ ಹೋಗಿ ನಂತರ ಆಗ್ನೇಯ ದಿಕ್ಕಿನ ದೆಕಪೊಲಿಯಕ್ಕೆ ಹೋದ ಕಾರಣವನ್ನು ಇಲ್ಲಿ ಕೊಡಲಿಲ್ಲ, ಆದರೆ ಆತನು ಯಾರೆಂದು ತಿಳಿದ ನಮಗೆ, ಆತನು ಅಲ್ಲಿ ಯಾರೋ ಒಬ್ಬ ವ್ಯಕ್ತಿಗೆ ಅಥವಾ ಕೆಲವರಿಗೆ ಸಹಾಯ ಮಾಡಲು ಮತ್ತು ಆಶೀರ್ವಧಿಸಲು ಅಲ್ಲಿ ಹೋಗಿರಬಹುದೆಂದು ನಮಗೆ ಸ್ಪಷ್ಟವಾಗಿ ತೋರುತ್ತದೆ.

*"ದೆಕಪೊಲಿ"*– 5:20. **33**

- **7:33** 8:23; ಯೋಹಾನ 9:6 ನೋಡಿರಿ. **34**

**7:34** ಮನುಷ್ಯನ ದುರ್ಬಲತೆಗಳು ಯೇಸುವಿಗೆ ಸಂಕಟವಾಗಿತ್ತು. (ಮತ್ತಾಯ 8:17; ಯೆಶಾಯ 63:9. ರೋಮಾ 8:26 ನೋಡಿರಿ). ಎಪ್ಫಥಾ ಎಂಬುದು ಅರಾಮ್ಯ ಭಾಷೆಯ ಪದವಾಗಿತ್ತು (5:41). **36**

- **7:36** 1:44; 5:43; ಮತ್ತಾಯ 8:4 ನೋಡಿರಿ.

# 8 1-10

- **8:1-10** ಮತ್ತಾಯ 15:32-39. **10**

**8:10** ಮಗದಾನ (ಮತ್ತಾಯ 15:39) ಈ ಪ್ರದೇಶದಲ್ಲಿತ್ತು. **11-21**

- **8:11-21** ಮತ್ತಾಯ 16:1-12. **22**

**8:22** ಬೇತ್ಸಾಯಿದ ಪಟ್ಟಣವು ಗಲಿಲಾಯ ಸಮುದ್ರದ ಉತ್ತರ ದಿಕ್ಕಿನಲ್ಲಿತ್ತು. **24-25**

**8:24-25** ಮೊದಲನೆಯ ಸಾರಿ ಅವನಿಗೆ ಸರಿಯಾಗಿ ಕಾಣಲಿಲ್ಲ. ಇದು ಯೇಸು ಒಬ್ಬನನ್ನು ಹಂತ ಹಂತವಾಗಿ ಸ್ವಸ್ಥಮಾಡಿದ ಏಕೈಕ ದಾಖಲೆಯಾಗಿದೆ. ಇದಕ್ಕೆ ಕಾರಣವನ್ನು ಕೊಟ್ಟಿಲ್ಲ. ಒಂದು ವೇಳೆ ಆ ಮನುಷ್ಯನ ನಂಬಿಕೆಯ ಕೊರತೆಯು ನಂತರದಲ್ಲಿ ಯೇಸುವು

ಉಪಯೋಗಿಸಿದ ವಿಧಾನದಿಂದ ಅವನ ನಂಬಿಕೆಯು ಬೆಳೆದಿರಬಹುದು. ಸ್ವಸ್ಥತೆಯ ಅಗತ್ಯವಿರುವವರು ಇದನ್ನು ಓದುವಾಗ ಅಥವಾ ಕೇಳಿಸಿಕೊಳ್ಳುವಾಗ, ಒಂದು ವೇಳೆ ತಕ್ಷಣವೇ ಸ್ವಸ್ಥವಾಗದಿದ್ದರೆ ಅವರಿಗೆ ನಿರಾಸೆಯಾಗಬಾರದೆಂದು ಆತನು ಬಯಸುತ್ತಾನೆ. ಯೇಸುವು ಅವರನ್ನು ಕ್ರಮೇಣವಾಗಿ ವಾಸಿಮಾಡಲು ಬಯಸಿರಬಹುದು. ಆತ್ಮೀಕ ಕ್ಷೇತ್ರದಲ್ಲಿಯೂ ಸಹ ಅನೇಕ ವೇಳೆ ಮನುಷ್ಯರಲ್ಲಿ ಹಂತಹಂತವಾಗಿ ಆತ್ಮೀಕ ಬೆಳವಣಿಗೆಯನ್ನು ಕಾಣಬಹುದಾಗಿದೆ. **24**

**8:24** ಉಗುಳಿನಲ್ಲಿ ಕುರುಡುತನವನ್ನು ವಾಸಿಮಾಡುವ ಯಾವ ಶಕ್ತಿಯೂ ಇಲ್ಲ, ಅಥವಾ ಆ ಮನುಷ್ಯನನ್ನು ವಾಸಿಮಾಡಲು ಯೇಸು ಅವನನ್ನು ಮುಟ್ಟುವ ಅಗತ್ಯವೂ ಇರಲಿಲ್ಲ (ಮತ್ತಾಯ 8:8,13). ಒಂದು ವೇಳೆ ಈ ರೀತಿಯ ಕಾರ್ಯಗಳ ಮೂಲಕ (7:33 ರಲ್ಲಿಯೂ ಸಹ) ಯೇಸುವು ನಂಬಿಕೆಯನ್ನು ಪ್ರೋತ್ಸಾಹಿಸುತ್ತಿದ್ದನು. **27-38**

- **8:27-38** ಮತ್ತಾಯ 16:13-27. **38**

**8:38** ಮತ್ತಾಯ 10:32-33; ರೋಮಾ 1:16 ನೋಡಿರಿ. ಹೆಮ್ಮೆ ಅಥವಾ ಮನುಷ್ಯರ ಭಯ ಅಥವಾ ಇತರರ ಮೆಚ್ಚಿಕೆಯನ್ನು ಪಡೆಯುವುದು ಇದೆಲ್ಲವೂ ಕ್ರಿಸ್ತನಿಗಾಗಿಯೂ ಮತ್ತು ಆತನ ಸುವಾರ್ತೆಗಾಗಿಯೂ ಅವರನ್ನು ನಾಚಿಕೆಪಡಿಸುತ್ತದೆ.

# 9 1

- **9:1** ಮತ್ತಾಯ 16:28. **2-13**
- **9:2-13** ಮತ್ತಾಯ 17:1-13. **6**

**9:6** ಲೂಕ 9:33. ನಮಗೆ ಏನು ಹೇಳಬೇಕೆಂದು ಗೊತ್ತಾಗದಿದ್ದರೆ, ಆ ಸಮಯದಲ್ಲಿ ಏನು ಹೇಳದಿರುವುದೇ ಒಳ್ಳೆಯದು. ಇನ್ನು ಪೇತ್ರನ ಅಜ್ಞಾನದ ಹೇಳಿಕೆಯ ಮುಖಾಂತರ ಶಿಷ್ಯರು ಮೋಶೆ ಮತ್ತು ಎಲೀಯನನ್ನು ಗುರುತಿಸಿದರು ಎಂಬುದಾಗಿ ನಮಗೆ ತಿಳಿಯುತ್ತದೆ. (ಅನೇಕ ಶತಮಾನಗಳ ಹಿಂದೆಯೇ ಮರಣಿಸಿದ್ದರಿಂದ ಅವರನ್ನು ಕಂಡಿರಲಿಲ್ಲ). **12**

**9:12** ಕರ್ತನು ಅವರಿಗೆ ಹಳೆಯ ಒಡಂಬಡಿಯನ್ನು ಸೂಚಿಸಿದನು. ಕೀರ್ತನೆ 22; ಮತ್ತು ಯೆಶಾಯ 53 ನೋಡಿರಿ. **14-32**

**9:14-32** ಇದು ಮತ್ತಾಯ 17:14-23 ರಲ್ಲಿನ ಸಂಪೂರ್ಣ ದಾಖಲೆಯಾಗಿದೆ. ಮತ್ತಾಯನು ಈ ವಾಗ್ವಾದವನ್ನು ತಿಳಿಸಿಲ್ಲ. ದೆವ್ವದಿಂದ ಬಾಧಿತನಾದ ಹುಡುಗನನ್ನು

ಶಿಷ್ಯರು ಗುಣಪಡಿಸಲಾಗದಿದ್ದಾಗ, ವಾಗ್ವಾದವು ಇದನ್ನು ಕುರಿತದ್ದಾಗಿರಬೇಕು ಮತ್ತು ಅದ್ಭುತಗಳನ್ನು ಮಾಡಲು ಯೇಸುವಿನ ಶಕ್ತಿಯ ಕುರಿತದ್ದಾಗಿರಬೇಕು (3:22 ನೋಡಿರಿ). **15**

**9:15** *"ಆಶ್ಚರ್ಯ ಪಟ್ಟರು"*– ಒಂದು ವೇಳೆ ಆತನು ಇದ್ದಕ್ಕಿದ್ದ ಹಾಗೆ ಆತನು ಪ್ರತ್ಯಕ್ಷನಾದ್ದರಿಂದ ಆಶ್ಚರ್ಯ ಪಟ್ಟಿರಬಹುದು. **16**

**9:16** ವಾಗ್ವಾದದ ವಿಷಯವಾಗಿ ಯೇಸು ತಿಳಿಯದವನಾಗಿರಲಿಲ್ಲ (ಮತ್ತಾಯ 9:4; ಯೋಹಾನ 1:47-49; 12:24-25; 21:17), ಆದರೆ ಆ ಹುಡುಗನ ತಂದೆಯು ಧೈರ್ಯದಿಂದ ಮಾತಾಡುವಂತೆ ಅವನನ್ನು ಪ್ರೋತ್ಸಾಹಿಸುತ್ತಿದ್ದನು. **17-18**

**9:17-18** ದೆವ್ವಗಳಿಂದ ಬಾಧಿತರಾದವರ ಕೆಲವು ರೋಗ ಲಕ್ಷಣಗಳನ್ನು ಗಮನಿಸಿ. ವಚನಗಳು 20,22,26 ಸಹ ನೋಡಿರಿ. **22**

**9:22** ಆ ಮನುಷ್ಯನು ಯೇಸುವಿನ ಶಕ್ತಿಯನ್ನು ಅನುಮಾನಿಸಿದನು. ಯೇಸುವಿನ ಪ್ರತಿನಿಧಿಗಳಿಂದ (ಆತನ ಶಿಷ್ಯರು) ಆಗದ ಕಾರ್ಯ ಯೇಸುವಿನಿಂದಲೂ ಸಾಧ್ಯವಿಲ್ಲವೆಂದು ಯೋಚಿಸಿರಬಹುದು. ಕ್ರೈಸ್ತರ ಬಲಹೀನತೆಯನ್ನು ನೋಡಿ ಜನರು ಯೇಸುವಿನ ಅಧಿಕಾರ ಮತ್ತು ಶಕ್ತಿಯ ಬಗ್ಗೆ ತಪ್ಪಾದ ತೀರ್ಮಾನ ಮಾಡಬಹುದು. **23**

**9:23** ನಂಬಿಕೆಯು ದೇವರ ಕೆಲಸಗಳಿಗೆ ಮಾರ್ಗವನ್ನು ಮಾಡುತ್ತದೆಂಬ ಸತ್ಯವೇದದ ಬೋಧನೆಯನ್ನು ಮತ್ತೊಮ್ಮೆ ನೋಡಿರಿ ಮತ್ತು ಅಪನಂಬಿಕೆಯು ಆತನು ಮಾಡುವ ಕೆಲಸಗಳಿಗೆ ಅಡ್ಡಿಯಾಗಿದೆ (6-5). ನಂಬಿಕೆಯು ದೇವರ ಶಕ್ತಿಯ ಕಾಲುವೆಯಾಗಿದೆ. ಅದು ಸರ್ವಶಕ್ತನನ್ನು ಹಿಡಿದುಕೊಳ್ಳುವ ಕೈಯಾಗಿದೆ. **24**

**9:24** ಆ ಮನುಷ್ಯನಿಗೆ ಅವನ ನಂಬಿಕೆಯ ಕೊರತೆಯ ಬಗ್ಗೆ ತಿಳಿದಿತ್ತು, ತನ್ನ ಹೃದಯದಲ್ಲಿ ನಂಬಿಕೆ ಮತ್ತು ಅಪನಂಬಿಕೆಯ ಮಿಶ್ರಣ. ಮತ್ತು ಇಲ್ಲಿಯೂ ಸಹ ಅವನು ಯೇಸುವನ್ನು ಸಹಾಯಕ್ಕಾಗಿ ಕೂಗುತ್ತಾನೆ (ವ.21). ಯೇಸು ಅವನ ಎರಡು ಪ್ರಾರ್ಥನೆಗಳಿಗೂ ಉತ್ತರ ಕೊಟ್ಟನು. ಅನೇಕ ವಿಶ್ವಾಸಿಗಳು ಸಹ ಇವನಂತೆಯೇ ಅಪನಂಬಿಕೆಯಿಂದ ಹೋರಾಡುತ್ತಿರುವವರಲ್ಲವೇ? ಆ ಮನುಷ್ಯನಿಗೆ ಸಹಾಯ ಮಾಡಿದ ಅದೇ ವ್ಯಕ್ತಿಯಿಂದಲೇ ನಿಮಗೆ ಸಹಾಯ ಬರುತ್ತದೆ. (ಇಬ್ರಿ 12:2). **25**

**9:25** ಈ ಅಶುದ್ಧ ಆತ್ಮವು ಆ ಹುಡಗನಿಂದ ಮಾತಾಡುವ ಮತ್ತು ಕೇಳಿಸಿಕೊಳ್ಳುವ

ಸಾಮರ್ಥ್ಯವನ್ನು ಕಿತ್ತುಕೊಂಡಿತ್ತು. ಒಬ್ಬ ವ್ಯಕ್ತಿಯನ್ನು ತಿರುಗಿ ಪ್ರವೇಶಿಸಬಾರದೆಂದು ಯೇಸುವು ಆಜ್ಞಾಪಿಸಿದ ಒಂದೇ ಒಂದು ಸಂದರ್ಭವಾಗಿದೆ, ಆದರೂ, ನಮಗೆ ಗೊತ್ತಿರುವ ಪ್ರಕಾರ, ಆತನು ಬೇರೆ ಸಮಯಗಳಲ್ಲಿಯೂ ಹೀಗೆ ಮಾಡಿರಬಹುದು. ಆ ಅಶುದ್ಧ ಆತ್ಮವು ಹಾಗೆ ಮಾಡುತ್ತದೆಂದು ಇದರಿಂದ ನಮಗೆ ಸ್ಪಷ್ಟವಾಗಿ ತಿಳಿಯುತ್ತದೆ (ಮತ್ತಾಯ 12:43-45). **29**

**9:29** ಕೆಲವು ದೆವ್ವಗಳು ಬೇರೆ ದೆವ್ವಗಳಿಗಿಂತಲೂ ಬಹು ದೃಢಮನಸ್ಸುಳ್ಳವುಗಳಾಗಿರುತ್ತವೆ ಆದ್ದರಿಂದ ಅವುಗಳನ್ನು ಹೊರಡಿಸಲು ಹೆಚ್ಚಿನ ಶ್ರದ್ಧೆ ಮತ್ತು ನಿರಂತರ ಪ್ರಯತ್ನದ ಅಗತ್ಯವಿದೆ. **30-31**

**9:30-31** ಈ ಬೋಧನೆಯು ಆತನ ಶಿಷ್ಯರಿಗೆ ಮಾತ್ರವಾಗಿದೆ ಇಡೀ ಲೋಕಕ್ಕಲ್ಲ. ಈಗ ಇದು ಸಂದೇಶದ ಮುಖ್ಯ ಭಾಗವಾಗಿದೆ ಇದನ್ನು ಆತನ ಶಿಷ್ಯರು ಇಡೀ ಲೋಕಕ್ಕೆ ಪ್ರಕಟಿಸಿದರು. (ಲೂಕ 24:45; 1 ಕೊರಿಂಥ 15:3-4). **32**

**9:32** ವಚನ 10; 8:31-33. ಅವರು ಶಿಷ್ಯರಾಗಿದ್ದರೂ ಸಹ ಆತ್ಮೀಕ ಕಾರ್ಯಗಳಲ್ಲಿ ಇನ್ನೂ ಮಂದಬುದ್ಧಿಯುಳ್ಳವರಾಗಿದ್ದರು-ಈ ದಿನಗಳಿಲ್ಲಿರುವ ಯೇಸುವಿನ ಅನೇಕ ಶಿಷ್ಯರಂತೆ. ಎಫೆ 1:17-19 ರಲ್ಲಿರುವ ಪೌಲನ ಅದ್ಭುತವಾದ ಪ್ರಾರ್ಥನೆಯನ್ನು ಹೋಲಿಸಿ. **34**

- **9:34** ಲೂಕ 22:24. ಯೆರೆ 45:5 ನೋಡಿರಿ. **35**
- **9:35** ಮತ್ತಾಯ 18:4; 20:26-28. **37**
- **9:37** ಮತ್ತಾಯ 18:5; 10:40 **38**

**9:38** ಯೇಸುವಿನ ಶಿಷ್ಯರ ಮದ್ಯದಲ್ಲಿ ಸಂಕುಚಿತ ಮನೋಭಾವ ಮತ್ತು ಪ್ರತ್ಯೇಕತೆಯ ಅಪಾಯವಿತ್ತು, ಕೆಲವರು ಹೀಗೆ ಯೋಚಿಸಿದರು, ತಮ್ಮ ಗುಂಪು ನಿಜವಾದ ಗುಂಪು ಮತ್ತು ದೇವರ ಕೆಲಸವನ್ನು ಮಾಡಲು ತಮಗೆ ಮಾತ್ರ ಹಕ್ಕಿದೆ ಎಂದು. ಇನ್ನೊಬ್ಬರನ್ನು ಪ್ರತ್ಯೇಕಿಸುವ ಮತ್ತು ಅವರನ್ನು ದೇವರ ಕೆಲಸ ಮಾಡಲು ಅನರ್ಹರು ಎನ್ನುವ ಮತ್ತು ತಮ್ಮನ್ನು ಅನರ್ಹರು ಎಂದುಕೊಳ್ಳುವ ಈ ರೀತಿಯ ನಡವಳಿಕೆಯು ಯಾವ ವಿಶ್ವಾಸಿಯಲ್ಲಿಯೂ ಇರಬಾರದು. ಸಂಖ್ಯಾ 11:25-29; 1 ಕೊರಿಂಥ 1:10-13 ನೋಡಿರಿ. **40**

**9:40** ಇದು ಮತ್ತಾಯ 12:30 ರ ಇನ್ನೊಂದು ಭಾಗ. **41**

**- 9:41** ಮತ್ತಾಯ 10:40-42. **42-47**

**- 9:42-47** ಮತ್ತಾಯ 18:6; 5:29-30. **48**

**9:48** ಇದು ಯೆಶಾಯ 66:24ರ ಉಲ್ಲೇಖನ. ನರಕವನ್ನು ಯಾವಾಗಲೂ ಉರಿಯುತ್ತಿರುವ ಬೆಂಕಿ ಮತ್ತು ಸಾಯದೆ ಯಾವಾಗಲೂ ಕಡಿಯುತ್ತಿರುವ ಹುಳಗಳಿರುವ ಬಹುದೊಡ್ಡ ಕಸದ ಗುಡ್ಡೆಗೆ ಹೋಲಿಸಬಹುದು. ಯೆರೂಸಲೇಮಿನ ಗೋಡೆಯ ಹೊರಗೆ ಗೆಹೆನ್ನ ಕಣಿವೆಯಲ್ಲಿ ಆ ರೀತಿಯ ಕಸದ ದೊಡ್ಡ ಗುಡ್ಡೆ ಇತ್ತು. ಹೊಸ ಒಡಂಬಡಿಕೆಯ 12 ಕಡೆಗಳಲ್ಲಿ, ಮತ್ತಾಯ ಮತ್ತು ಮಾರ್ಕನ ಸುವಾರ್ತೆಗಳಲ್ಲಿ, ಲೂಕನ ಸುವಾರ್ತೆಯಲ್ಲಿ ಮತ್ತು ಯಾಕೋಬನ ಪತ್ರಿಕೆಯಲ್ಲಿ ಒಂದು ಸಾರಿ ಈ ಗೆಹೆನ್ನ ಎಂಬ ಪದವನ್ನು "ನರಕ" ಎಂದು ಭಾಷಾಂತರಿಸಲಾಗಿದೆ. ಪಾಪಿಗಳಿಗೆ ಸಿದ್ಧಮಾಡಲ್ಪಟ್ಟಿರುವ ಭಯಂಕರ ಸ್ಥಳದ ಬಗ್ಗೆ ಯೇಸುವು ಒಂದು ಚಿತ್ರಣವನ್ನು ಕೊಡುತ್ತಾನೆ. ಅದನ್ನು ನಿರ್ಲಕ್ಷಿಸುವುದು ಮೂರ್ಖತನವಾಗಿದೆ. ಮತ್ತಾಯ 5:22; ಲೂಕ 16:23-24; ಪ್ರಕ 20:14-15. ಈ ಲೋಕದ ಕಸ ಮತ್ತು ಹೊಲಸನ್ನು ಆರಿಸಿಕೊಳ್ಳುವವರು (ಫಿಲಿಪ್ಪಿ 3:8) ಮತ್ತು ಕ್ರಿಸ್ತನ ಮೂಲಕ ರಕ್ಷಣೆಯನ್ನು ತಿರಸ್ಕರಿಸುವವರು, ತಮ್ಮನ್ನು ದುಷ್ಟ ಮತ್ತು ಪ್ರಯೋಜನವಿಲ್ಲದ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವವರೆಲ್ಲರೂ ಈ ಜಗತ್ತಿನ ಕಸದ ಗುಡ್ಡೆಗೆ ಹೋಗುವರು. ಇದು ಪರಿಪೂರ್ಣ ನ್ಯಾಯದ ದೈವಿಕ ಕೆಲಸವಾಗಿರುತ್ತದೆ. ಹಾಗಾದರೆ ಮಾನವರಾದ ನಾವೆಲ್ಲರೂ ಎಷ್ಟು ಶ್ರದ್ಧೆಯಿಂದ ಪಾಪ ಮತ್ತು ಪಾಪವನ್ನು ಮಾಡಲು ಪ್ರೇರಿಸುವ ಕಾರ್ಯಗಳನ್ನು "ಕಡಿದು ಹಾಕ" ಬೇಕಾಗಿದೆ! **49**

**9:49** ಈ ವಚನದ ಅರ್ಥವನ್ನು ಮತ್ತು ಇದರ ಹಿಂದಿನ ಮತ್ತು ಮುಂದಿನ ವಚನಗಳ ಜೋಡನೆಯನ್ನು ವಿವೇಚಿಸುವುದು ಕಷ್ಟಕರವಾಗಿದೆ. ಉಪ್ಪು ಮತ್ತು ಬೆಂಕಿ ಇವೆರಡು ಸೇರಿ ಮನುಷ್ಯನು ಅನುಭವಿಸಲಿಕ್ಕಿರುವ ಯಾವುದೋ ಒಂದು ಕಾರ್ಯವನ್ನು ವಿವರಿಸುತ್ತದೆ. ಉಪ್ಪು ಸಂರಕ್ಷಿಸುತ್ತದೆ, ಬೆಂಕಿ ದಹಿಸುತ್ತದೆ. ಕೆಲವು ಪಂಡಿತರು ಇದರ ಅರ್ಥವನ್ನು ಹೀಗೆ ಯೋಚಿಸುತ್ತಾರೆ, ನಿತ್ಯಕ್ಕೂ ಉರಿಯುವ ನರಕದ ಬೆಂಕಿಯು ಸಂಪೂರ್ಣವಾಗಿ ದಹಿಸಲಾರದಂತೆ ಅವರು ಯಾವಾಗಲೂ ಸಂರಕ್ಷಿಸಲ್ಪಡುತ್ತಾರೆ. "ಎಲ್ಲರು" ಎಂಬುದು ಅಕ್ಷರಶಃ ಎಲ್ಲಾ ಮನುಷ್ಯರು, ಒಂದು ವೇಳೆ ಕಳೆದುಹೋದವರು ನರಕದ ಬೆಂಕಿಯಿಂದ ಸಂರಕ್ಷಿಸಲ್ಪಡುವರು

ಎಂದು ಈ ವಚನವು ತಿಳಿಸುತ್ತದೆ, ರಕ್ಷಿಸಲ್ಪಟ್ಟವರು ಬೆಂಕಿಯಿಂದ ಈಗ ಪರಿಶುದ್ಧಗೊಳಿಸಲ್ಪಡುತ್ತಾರೆ (ಕೀರ್ತನೆ 66:12; ಮಲಾಕಿ 3:2; 1 ಪೇತ್ರ 1:7). **50**

**9:50** ಮತ್ತಾಯ 5:13. ಇಲ್ಲಿ ಉಪ್ಪು ಯೇಸು ಕ್ರಿಸ್ತನ ಶಿಷ್ಯತ್ವದ ಗುರುತಾಗಿ ಉಪಯೋಗಿಸಲ್ಪಟ್ಟಿದೆ. ಈ ಲೂಕ 14:34ರ ಸನ್ನಿವೇಶದೊಂದಿಗೆ ಹೋಲಿಸಿರಿ. ಸಮಾಧಾನವು ಒಬ್ಬ ನಿಜವಾದ ಶಿಷ್ಯನಿಗೆರಬೇಕಾದ ಗುರುತಾಗಿದೆ. ಮತ್ತಾಯ 5:9 ಹೋಲಿಸಿರಿ.

# 10 1-16

**- 10:1-16** ಮತ್ತಾಯ 19:1-15. **1**

**10:1** ನೋಡಿರಿ 2:13; 4:2; 6:6,34; ಮತ್ತಾಯ 4:23; ಕೀರ್ತನೆ 24:4-5. ಜನರಿಗೆ ಸತ್ಯವನ್ನು ಬೋಧಿಸಲು ಕರ್ತನಾದ ಯೇಸುವು ಈಗಲೂ ಸಂತೋಷಿಸುತ್ತಾನೆ. **15**

**- 10:15** ಮತ್ತಾಯ 18:3. **17-31**

**10:17-31** ನೋಡಿರಿ ಮತ್ತಾಯ 19:16-30 ಟಿಪ್ಪಣಿ. **17**

**10:17** ಅವನು ಬಹು ಆಸಕ್ತಿಯಿಂದಲೂ ಮತ್ತು ಭಯಭಕ್ತಿಯಿಂದಲೂ ಬಂದನು, ಆದರೆ ಹೋಗುವಾಗ ದುಃಖದಿಂದ ಹೋದನು (ವ.22) **21**

**10:21** ಈಗ ಯೇಸು ಈ ಯೌವನಸ್ಥನನ್ನು ಕಠಿಣವಾದ ಪರೀಕ್ಷೆಗೆ ಒಳಪಡಿಸಿದನು, ಆದರೆ ಆತನು ಹಾಗೆ ಮಾಡಿದ ಕಾರಣವೇನಂದರೆ ಆತನ ದೈವಿಕ ಪ್ರೀತಿಯು ಆತನ ಹೃದಯವನ್ನು ತುಂಬಿತ್ತು ಮತ್ತು ಆತನು ಅವನಿಗೆ ಹೆಚ್ಚಿನ ಒಳ್ಳೆಯದನ್ನು ಬಯಸಿದನು. ಕರ್ತನು ನಮಗೆ ಏನಾದರು ಮಾಡಲು ಹೇಳಿದಾಗ ಅದು ಕಷ್ಟಕರವಾಗಿದ್ದರೂ ಮತ್ತು ನಮಗೆ ನೋವುತರುವಂತದ್ದಾಗಿದ್ದರೂ, ಆತನು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ಆದ್ದರಿಂದ ನಮ್ಮ ಒಳ್ಳೆಯದಕ್ಕಾಗಿ ಆತನು ಹೇಳಿದ್ದನ್ನು ನಾವು ಮಾಡಬೇಕು. **22**

**10:22** ಈ ಮನುಷ್ಯನು ಕ್ರಿಸ್ತನಿಗಿಂತಲೂ ಮತ್ತು ನಿತ್ಯಜೀವಕ್ಕಿಂತಲೂ ತನಗಿದ್ದ ಆಸ್ತಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟನು. ದೇವರು ಒಬ್ಬನಿಗೆ ಕೊಟ್ಟಿದ್ದನ್ನು ಅವನು ಕಡಿಮೆಯೆಂದು ಭಾವಿಸಿದರೆ ಅಂಥವನಿಗೆ ಯಾಕೆ ಕೊಡಬೇಕು? ಜ್ಞಾನೋ 4:7; ಲೂಕ 14:33

ಹೋಲಿಸಿರಿ. **24**

**10:24** *"ಮಕ್ಕಳು"*– ಯೇಸು ಅವರನ್ನು ಮಕ್ಕಳೆಂದು ಕರೆಯುತ್ತಾನೆ ಯಾಕಂದರೆ ಅಧ್ಯಾತ್ಮಿಕವಾಗಿ ಆತನ ಶಿಷ್ಯರು ದೇಹದಲ್ಲಿ ಬೆಳದವರಾಗಿದ್ದರೂ, ಅವರು ಆತನಿಗೆ ಚಿಕ್ಕ ಮಕ್ಕಳಂತಿದ್ದರು. ನೋಡಿರಿ ಮತ್ತಾಯ 10:42 ನೋಡಿರಿ. **30**

**10:30** ಯೇಸುವನ್ನು ಹಿಂಬಾಲಿಸುವವರಿಗೆ ಹಿಂಸೆಯು ಸಹ ಅವರನ್ನು ಹಿಂಬಾಲಿಸುತ್ತದೆ – ಮತ್ತಾಯ 24:9; ಲೂಕ 11:29; 21:12; ಯೋಹಾನ 15:20; ಅಪೊ 7:52; 1 ಥೆಸ 3:4; 2 ತಿಮೊ 3:12. ಆದರೆ ಅವರು ಸ್ವೀಕರಿಸಲಿಕ್ಕಿರುವ ಮಹಿಮೆಗೆ ಅದನ್ನು ಹೋಲಿಸುವುದು ಯೋಗ್ಯವಲ್ಲ – ರೋಮಾ 8:18; 2 ಕೊರಿಂಥ 4:17. **32-45**

- **10:32-45** ಮತ್ತಾಯ 20:17-28. **32**

**10:32** ಆತನ ನಡವಳಿಕೆಯಲ್ಲಿ ಏನೋ ಇತ್ತು ಮತ್ತು ಆತನ ಮುಖವು ಶಿಷ್ಯರಿಗೆ ಹೆದರಿಯನ್ನುಂಟು ಮಾಡಿತು. **34**

**10:34** ಲೂಕ 9:51; ಯೆಶಾಯ 50:7 ಹೋಲಿಸಿರಿ. **35**

**10:35** ಅವರ ತಾಯಿ ಅವರೊಂದಿಗಿದ್ದಳು ಮತ್ತು ಆಕೆಯು ಮತ್ತು ಅವರು ಈ ಬಿನ್ನಹವನ್ನು ಮಾಡಿದರು (ಮತ್ತಾಯ 20:20-21). **38**

**10:38** *"ಪಾತ್ರೆ"*– ಎಂಬ ಪದದಂತೆ ಇಲ್ಲಿ ದೀಕ್ಷಾಸ್ನಾನವನ್ನು ಒಂದು ಚಿನ್ಹೆಯಾಗಿ ಚಿತ್ರಣಮಾಡಲಾಗಿದೆ. ಯೇಸು ಇಲ್ಲಿ ನೀರಿನಲ್ಲಿ ಮುಳುಗುವ ದೀಕ್ಷಾಸ್ನಾನದ ಬಗ್ಗೆ ಹೇಳುತ್ತಿಲ್ಲ, ಆದರೆ ಕಷ್ಟ ಮತ್ತು ಸಂಕಟಗಳಲ್ಲಿ ಮುಳುಗಿರುವುದನ್ನು ಸೂಚಿಸಿದನು. ಲೂಕ 12:50 ಹೋಲಿಸಿರಿ. **46-52**

**10:46-52** ಮತ್ತಾಯ 20:29-34. ಇಬ್ಬರು ಕುರುಡರು ಈ ಸಮಯದಲ್ಲಿ ಸ್ವಸ್ಥತೆಯನ್ನು ಹೊಂದಿದರು ಎಂದು ಮತ್ತಾಯನು ಹೇಳುತ್ತಾನೆ. ಮಾರ್ಕನು ವಿಶೇಷ ಸೂಚನೆಗಾಗಿ ಒಬ್ಬನನ್ನು ಬಿಟ್ಟುಬಿಟ್ಟನು (5:1-2 ಹೋಲಿಸಿರಿ). **51**

**10:51** *"ರಬ್ಬೀ" ಎಂಬ ಇಬ್ರಿಯ ಪದಕ್ಕೆ ಅರ್ಥ "ನನ್ನ ಬೋಧಕ" ಅಥವಾ "ನನ್ನ ಗುರು".* **52**

**10:52** ನಂಬಿಕೆಯ ಶಕ್ತಿಯನ್ನು ಮತ್ತೊಂದು ಸಾರಿ ಕ್ರಿಸ್ತನಲ್ಲಿ ಕಾಣುತ್ತೇವೆ. (9:23;

ಮತ್ತಾಯ 8:13; 9:22,29).

# 11 1-11

- **11:1-11** ಮತ್ತಾಯ 21:1-9. **10**

**11:10** ದಾವೀದನು ಮತ್ತು ಅವನ ಸಂತತಿಗೆ ದೇವರು ರಾಜ್ಯವನ್ನು ನಿತ್ಯಕ್ಕೂ ವಾಗ್ದಾನ ಮಾಡಿದ್ದನು. ನೋಡಿರಿ 2 ಸಮು 7:11-14; ಮತ್ತಾಯ 1:1; ಲೂಕ 1:32,69. **11**

**11:11** *"ಹನ್ನೆರಡು ಜನ"*– ಹನ್ನೆರಡು ಅಪೋಸ್ತಲರು (3:16-19) **12-25**

**11:12-25** ಮತ್ತಾಯ 21:12-22. **18**

**11:18** ಈ ಯಾಜಕರು ತಮ್ಮ ಪದವಿ, ಅಧಿಕಾರ ಮತ್ತು ಗೌರವವನ್ನು ಪ್ರೀತಿಸುತ್ತಿದ್ದರು ಮತ್ತು ಯೇಸು ಇವರಿಗೆ ಸವಾಲಗುವನೆಂಬ ಹೆದರಿಕೆ ಅವರಿಗಿತ್ತು. **20**

**11:20** ಅಂಜೂರದ ಮರವು ಹಿಂದಿನದಿನವೇ ಸ್ವಲ್ಪಮಟ್ಟಿಗೆ ಒಣಗಿತ್ತೆಂದು ಮತ್ತಾಯನುಸ್ಪಷ್ಟಪಡಿಸುತ್ತಾನೆ. ಆದರೆ ಈಗ ಅದು ಸಂಪೂರ್ಣವಾಗಿ ಒಣಗಿಹೋಗಿತ್ತು – "ಬುಡದಿಂದ". **24**

**11:24** ಮತ್ತೆ ಯೇಸು ನಂಬಿಕೆಯ ಶಕ್ತಿಯನ್ನು ಒತ್ತಿ ಹೇಳುತ್ತಾನೆ (2:5; 5:34; 6:5; 10:52; ಮತ್ತಾಯ 9:22) ನಾವು ನಿಜವಾಗಿಯೂ ದೇವರು ನಮ್ಮ ಪ್ರಾರ್ಥನೆಗಳಿಗೆ ಉತ್ತರ ಕೊಡುತ್ತಾನೆಂದು ನಂಬಿದರೆ ಆತನು ಅಭ್ಯಂತರವಿಲ್ಲದೆ ನಾವು ಕೇಳಿಕೊಳ್ಳುವದನ್ನು ನಮಗೆ ಕೊಡುತ್ತಾನೆ. ಈ ರೀತಿಯ ನಂಬಿಕೆ ಬರಲು ಹೇಗೆ ಸಾದ್ಯ? ನಾವು ನಂಬಿದಾಗ ದೇವರು ಕೇಳಿಸಿಕೊಳ್ಳುತ್ತಾನೆ ಈಗ ಕೇಳಿಸಿಕೊಳ್ಳುವುದಿಲ್ಲ ಎಂದು ನಮ್ಮಷ್ಟಕ್ಕೆ ನಾವೇ ಯೋಚಿಸುವುದು. ನಿಜವಾದ ನಂಬಿಕೆಯು ನಾವು ದೇವರ ವಾಕ್ಯಕ್ಕೆ ನಮ್ಮ ಪ್ರತಿಕ್ರಿಯೆ, ಮತ್ತು ನಮ್ಮ ಹೃದಯದಲ್ಲಿ ಪವಿತ್ರಾತ್ಮನ ಕಾರ್ಯಮಾಡುವುದು. ಹೋಲಿಸಿರಿ ರೋಮಾ. 8:26; 1 ಯೋಹಾನ 5:14-15. ನೋಡಿರಿ ಮತ್ತಾಯ 9:22. **25**

**11:25** ಈ ಪದಗಳನ್ನು ಗಮನಿಸಿ "ನಿಂತುಕೊಂಡು ಪ್ರಾರ್ಥಿಸುವುದು". ಪ್ರಾರ್ಥನೆಮಾಡಲು ಯಾವ ಒಂದು ನಿಲವು ಸರಿಯಾದುದೆಂದು ಸತ್ಯವೇದವು ಹೇಳುವುದಿಲ್ಲ. **26**

**11:26** *"ನಿಮ್ಮ ತಂದೆಯು ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸಿಬಿಡುವನು"*– ಹೋಲಿಸಿರಿ

ಮತ್ತಾಯ 6:14-15. **27-33**

- **11:27-33** ಮತ್ತಾಯ 21:23-27

# 12 1-12

- **12:1-12** ಮತ್ತಾಯ 21:33-46. **13-17**

- **12:13-17** ಮತ್ತಾಯ 22:15-22. **15**

**12:15** ಕಪಟತನ ಬಗ್ಗೆ ಬೇರೆ ವಾಕ್ಯಹೊಂದಿಕೆಗಳನ್ನು ನೋಡಿರಿ ಮತ್ತಾಯ 6:2,5,16; 7:5; 23:13,28; ಲೂಕ 12:1; 19:15; 1 ತಿಮೊ 4:2; 1 ಪೇತ್ರ 2:1. **18-27**

- **12:18-27** ಮತ್ತಾಯ 22:23-33. **28-37**

- **12:28-37** ಮತ್ತಾಯ 22:34-46. **29**

- **12:29** ಧರ್ಮೋ 6:4.

*"ಕರ್ತನು"*– ಇಲ್ಲಿ ಇದು ಯೊಹೋವನನ್ನು ಸೂಚಿಸುತ್ತದೆ – ಹಳೆ ಒಡಂಬಡಿಕೆಯಲ್ಲಿ ದೇವರ ಹೆಸರು. **33**

**12:33** ನೋಡಿರಿ 1 ಸಮು 15:22; ಹೋಶೇಯ 6:6; ಮೀಕ 6:6-8. **34**

**12:34** ಯೇಸು ಉತ್ತರವನ್ನು ಸರಿ ಎಂದು ಒಪ್ಪಿಕೊಳ್ಳುವಾಗ ಈ ಮನುಷ್ಯನು ಸ್ವಲ್ಪ ಆತ್ಮೀಕ ತಿಳುವಳಿಕೆ ಮತ್ತು ಸ್ವಲ್ಪ ನಮ್ರತೆಯನ್ನು ತೋರಿಸಿದನು. ಅವನು ದೇವರ ರಾಜ್ಯಕ್ಕೆ ಹತ್ತಿರವಾಗಿದ್ದನು, ಆದರೆ ಇನ್ನೂ ಅದರೊಳಗಿರಲಿಲ್ಲ. ಎಲ್ಲಾ ಪೀಳಿಗೆಯಲ್ಲಿಯೂ ಈ ರೀತಿಯ ಸ್ಥಿತಿಯಲ್ಲಿರುವ ಅನೇಕ ಜನರು ಇರುವುದರಲ್ಲಿ ಸಂದೇಹವಿಲ್ಲ. ದೇವರ ರಾಜ್ಯದ ಮೇಲಿನ ಟಿಪ್ಪಣಿಯನ್ನು ಮತ್ತಾಯ 4:17. **35**

**12:35** *"ದಾವೀದನ ಮಗ"*– ಟಿಪ್ಪಣಿ ಮತ್ತಾಯ 1:1 ನೋಡಿರಿ. **36**

**12:36** *"ಪವಿತ್ರಾತ್ಮನ ಮೂಲಕ"*– ಎಂಬ ಮಾತನ್ನು ಗಮನಿಸಿರಿ ಮತ್ತಾಯ 22:43 ನೋಡಿರಿ. **38-39**

**12:38-39** ಮತ್ತಾಯ 23:5-7 ಹೋಲಿಸಿರಿ. **40**

**12:40** ಅವರು ಹೊರ ನೋಟಕ್ಕೆ ಧಾರ್ಮಿಕರಾಗಿ ಕಾಣುತ್ತಾರೆ, ಆದರೆ ರಹಸ್ಯವಾಗಿ

ಅವರಲ್ಲಿ ದುರಾಸೆ ಮತ್ತು ದಯೆಯಿಲ್ಲದವರು, ಬಲಹೀನರನ್ನು ಮತ್ತು ಅಸಾಯಕರನ್ನು ಹೊಂಚುಹಾಕುವುದು. ಮತ್ತಾಯ 23:25-28 ಹೋಲಿಸಿರಿ. (ಮತ್ತಾಯ 23ನೇ ಪೂರ್ಣ ಅಧ್ಯಾಯವು ಮನಸ್ಸನ್ನು ಮತ್ತು ಧಾರ್ಮಿಕ ಕಪಟತೆಯ ವಿಧಾನಗಳನ್ನು ಭಯವಿಲ್ಲದೆ ಬಹಿರಂಗಮಾಡುವುದು). **41-44**

**12:41-44** ದೇವರಿಗೆ ಕೊಡುವುದರ ಬಗ್ಗೆ ಕರ್ತನಾದ ಯೇಸುವು ಬೇಕಾದ ಕೆಲವು ಪಾಠಗಳನ್ನು ಬೋಧಿಸುತ್ತಾನೆ. ನಾವು ಕೊಡುವುದನ್ನು ಈಗಲೂ ಆತನು ನೋಡುತ್ತಿದ್ದಾನೆ. ಇಬ್ರಿ 4:12-13 ಹೋಲಿಸಿರಿ. ತಮಗಾಗಿ ಬಹು ಹೆಚ್ಚಿನದನ್ನು ಇಟ್ಟುಕೊಂಡು ಮಿಕ್ಕದ್ದರಲ್ಲಿ ಕಾಣಿಕೆಯನ್ನು ಕೊಡುವ ಐಶ್ವರ್ಯವಂತರ ಬಗ್ಗೆ ಆತನು ಪ್ರಭಾವಿತನಾಗಲಿಲ್ಲ. ದೇವರ ದೃಷ್ಟಿಯಲ್ಲಿ ಕಡಿಮೆಯಾದರೂ ಸಾಧ್ಯವಾದದ್ದನ್ನು ಕೊಡುವುದು ಅತಿದೊಡ್ಡ ಮೊತ್ತಕ್ಕಿಂತಲೂ ಶ್ರೇಷ್ಠವಾಗಿದೆ. ಆತನು ಕೊಡುವವನ ಉದ್ದೇಶವನ್ನು ನೋಡುತ್ತಾನೆ ಮತ್ತು ಒಬ್ಬನು ಎಷ್ಟು ಕೊಡುತ್ತಾನೆಂದು ಮಾತ್ರ ನೋಡುವುದಿಲ್ಲ ಆದರೆ ಎಷ್ಟನ್ನು ತನಗಾಗಿ ಇಟ್ಟುಕೊಳ್ಳುತ್ತಾನೆಂದು ನೋಡುತ್ತಾನೆ. ಬಡ ವಿಶ್ವಾಸಿಗಳು ತಮಗಿರುವುದನ್ನು ಕೊಡುವಾಗಲೂ ಸಹ ಕರ್ತನಾದ ಯೇಸುವು ಸಂತೋಷಿಸುತ್ತಾನೆ. 2 ಕೊರಿಂಥ 8:1-5,12 ಹೋಲಿಸಿ. 2 ಕೊರಿಂಥ 9:15 ಟಿಪ್ಪಣಿ ಮತ್ತು ಹೊಂದಾಣಿಕೆಗಳನ್ನು ನೋಡಿರಿ. **41**

**12:41** ಖಜಾನೆಯು ದೇವಾಲಯದ ಅಂಗಳದಲ್ಲಿತ್ತು. **42**

**12:42** ಇಲ್ಲಿ ಗ್ರೀಕ್ ಪದದ ನಾಣ್ಯಗಳು ಆ ದೇಶದಲ್ಲಿ ಉಪಯೋಗಿಸುತ್ತಿದ್ದ ಅತಿ ಸಣ್ಣ ಮೊತ್ತದ ನಾಣ್ಯಗಳನ್ನು ಸೂಚಿಸುತ್ತದೆ. ಆಕೆಯು ತನಗಾಗಿ ಒಂದು ಕಾಸನ್ನೂ ಇಟ್ಟುಕೊಳ್ಳದೆ ತನ್ನಲ್ಲಿದ್ದ ಎರಡು ಕಾಸುಗಳನ್ನು ಕೊಟ್ಟಳು. ದೇವರಿಗೆ ಕೊಡುವಾಗ ತನಗಿರುವುದರಲ್ಲಿ ಅರ್ಧ ಭಾಗವನ್ನು ಕೊಟ್ಟರೆ ಸಾಕೆಂದು ಆಕೆಯು ನೆನಸಲಿಲ್ಲ.

# 13 1-37

- **13:1-37** ಮತ್ತಾಯ 24:1-51. **1-2**

**13:1-2** ಯೇಸುವಿನ ಶಿಷ್ಯರು ಸಹ ಮನುಷ್ಯರ ಕೆಲಸಗಳನ್ನು ಒಂದು ವೇಳೆ ತುಂಬಾ ಮೆಚ್ಚಿಕೊಂಡಿರಬಹುದು ಮತ್ತು ಅವರ ಅಂದವನ್ನು ಕಂಡು ಅವರು ಬೆಲೆಬಾಳುವವರು ಎಂದು ಯೋಚಿಸಿರಬಹುದು. ಅಂತ್ಯದಲ್ಲಿ ಮನುಷ್ಯನ ಎಲ್ಲಾ ಕೆಲಸಗಳು ಕೆಳಗೆ ಉರುಳುತ್ತವೆ. ನೋಡಿರಿ ಯೆಶಾಯ 2:6; ಪ್ರಕ 18:9-24. **11**

- **13:11** ಮತ್ತಾಯ 10:19-20.

*“ಪರಿಶುದ್ಧ ಆತ್ಮ”*– ಮತ್ತಾಯ 3:16; ಯೋಹಾನ 14:16-17. **12-13**

- **13:12-13** ಮತ್ತಾಯ 10:21-22. **14**

- **13:14** ಮತ್ತಾಯ 24:15.

*“ನಿಲ್ಲಬಾರದ ಸ್ಥಳದಲ್ಲಿ”*– ಇದರ ಅರ್ಥ ದೇವಾಲಯ. 2 ಥೆಸ 2:4 ಹೋಲಿಸಿರಿ. **29**

**13:29** *“ಆತನು ಹತ್ತಿರವಾಗಿದ್ದಾನೆ ಎಂದು ತಿಳುಕೊಳ್ಳಿರಿ”*– ಇದನ್ನು ಹೀಗೆಯೂ ತರ್ಜುಮೆ ಮಾಡಬಹುದು “ಹತ್ತಿರವಾಗಿದೆ ಎಂದು ತಿಳುಕೊಳ್ಳಿರಿ”. **30**

**13:30** *“ಈ ಸಂತತಿಯು”*– ಅಥವಾ “ ಈ ಜನಾಂಗ”. **32-37**

**13:32-37** ಇದು ಮತ್ತಾಯ 24:36-51ರ ಸಂಕ್ಷಿಪ್ತ ವರದಿಯಾಗಿದೆ. ಕರ್ತನ ಎರಡನೆಯ ಬರೋಣಕ್ಕಾಗಿ ಎದುರು ನೋಡುತ್ತಿರುವದಕ್ಕೆ ಒತ್ತು ನೀಡಲಾಗಿದೆ (ವಚನಗಳು 33,35,37).

# 14 1-72

- **14:1-72** ಮತ್ತಾಯ 26:1-75.

*“ಪಸ್ಕದ ಹಬ್ಬ”*– ವಿಮೋ 12:11; ಯಾಜಕ 23:5-6. **4**

**14:4** ಶಿಷ್ಯರೆಲ್ಲರು ಇದನ್ನು ಒಟ್ಟಾಗಿ ಹೇಳಿದ್ದು (ಮತ್ತಾಯ 26:8), ಮತ್ತು ಇದನ್ನು ಮಾಡುವುದರಲ್ಲಿ ಯೂದನು ಪ್ರಮುಖನಾಗಿದ್ದನು (ಯೋಹಾನ 12:4-5 ಸಹ ನೋಡಿರಿ. ಇದು ಒಂದು ವೇಳೆ ಬೇರೆ ಸಮಯದಲ್ಲಿದ್ದಿರಬಹುದು. ಟಿಪ್ಪಣಿ ಯೋಹಾನ 12:2 ನೋಡಿರಿ). **5**

**14:5** *“ಮುನ್ನೂರು ಬೆಳ್ಳಿ ನಾಣ್ಯಗಳು”*– ಗ್ರೀಕ್ ಭಾಷೆಯಲ್ಲಿ “ಮುನ್ನೂರು ದಿನಾರಿಯ”, ಅಂದರೆ 300 ದಿನಗಳ ಕೂಲಿ. **11**

**14:11** ನಂಬಿಕೆ ದ್ರೋಹ ಮತ್ತು ಪರಿಶುದ್ಧನಾದವನನ್ನು ಕೊಲ್ಲಲು ಸಂದರ್ಭ ಮತ್ತು ಅವರನ್ನು ಸಂತೋಷಪಡಿಸಿದ ಉತ್ತಮವಾಗಿ ಜೀವಿಸಿದ ವ್ಯಕ್ತಿ. ಅಪ್ರಾಮಾಣಿಕತೆಯ ಅವರ ಗುಣದ ಬಗ್ಗೆ ಬೇರೆಯಾವುದಾದರು ಪದ ವಿವರಿಸಬಹುದೇ? ಇಷ್ಟವಿಲ್ಲದಿದ್ದರೂ ಕೇಡನ್ನು

ಮಾಡುವುದು ಒಂದು ರೀತಿ, ಅದನ್ನು ಮಾಡುವುದರಲ್ಲಿ ಸಂತೋಷಪಡುವುದು ಇನ್ನೊಂದು ರೀತಿ ಮತ್ತು ಇದು ಬಹಳ ಕೆಟ್ಟದ್ದಾಗಿದೆ. **12**

**14:12** *"ಪಸ್ಕದ ಕುರಿಮರಿಯನ್ನು ಕೊಯ್ದನು"*– ಕುರಿಮರಿ – ವಿಮೋ 12:3-11. ಯೋಹಾನ 1:29 ನೋಡಿರಿ. **13-15**

**14:13-15** ಇನ್ನೂ ನೆರವೇರದ ಸಂಗತಿಗಳನ್ನು ಮುಂಚಿತವಾಗಿಯೇ ವಿವರವಾಗಿ ತಿಳಿದುಕೊಳ್ಳುವ ಯೇಸುವಿನ ಸಾಮರ್ಥ್ಯ. **24**

**14:24** ಮತ್ತಾಯ 26:28 ಕ್ರಿಸ್ತನು ರಕ್ತವನ್ನು ಸುರಿಸಲು ಕಾರಣವನ್ನು ಕೊಡುತ್ತದೆ. **27**

- **14:27** ಜೆಕರ್ಯ 13:7. **36**

**14:36** *"ಅಬ್ಬಾ"*– ಅರಾಮಿಕ್ ಭಾಷೆಯಲ್ಲಿ ಈ ಪದಕ್ಕೆ "ಅಪ್ಪಾ" ಎಂದು ಅರ್ಥ. ತಂದೆಯಾದ ದೇವರಿಗೆ ಕ್ರಿಸ್ತನನ್ನು ವೇದನೆ ಮತ್ತು ಮರಣದಿಂದ ರಕ್ಷಿಸಲು ಸಾದ್ಯವಿತ್ತು, ಆದರೆ ಅದು ಆತನ ಚಿತ್ತವಾಗಿರಲಿಲ್ಲ. ಕ್ರಿಸ್ತನನ್ನು ರಕ್ಷಿಸುವುದು, ಮಾನವರನ್ನು ರಕ್ಷಿಸಲು ಆತನು ಮಾಡಿದ ರಕ್ಷಣೆಯ ಯೋಜನೆಯನ್ನು ತಡೆಹಿಡಿಯುವದು ಮತ್ತು ಮಾನವರನ್ನು ಅವರ ವಿನಾಶಕ್ಕೆ ಬಿಟ್ಟುಬಿಡುವುದಾಗಿದೆ. **51-52**

**14:51-52** ಮಾರ್ಕನು ಮಾತ್ರ ಇದನ್ನು ದಾಖಲಿಸಿದ್ದಾನೆ. ಒಂದು ವೇಳೆ ಆ ಯೌನಸ್ಥನು ಮಾರ್ಕನೇ ಆಗಿದ್ದಿರಬಹುದು. ಇಲ್ಲದಿದ್ದರೆ ಯಾಕೆ ಈ ಘಟನೆಯನ್ನು ದಾಖಲಿಸಿದನೆಂದು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತದೆ. **54**

**14:54** ಮತ್ತಾಯ 26:58 ಪೇತ್ರನು ಯಾಕೆ ಮಠದ ಅಂಗಳದೊಳಗೆ ಹೋದನೆಂಬುದನ್ನು ಹೇಳುತ್ತದೆ. **55**

**14:55** *"ಹಿರೀಸಭೆ"*– "ಉಚ್ಚನ್ಯಾಯಾಲಯ" – ಮತ್ತಾಯ 5:22. **58**

**14:58** ಯೋಹಾನ 2:19 ರಲ್ಲಿನ ಯೇಸುವಿನ ಮಾತುಗಳನ್ನು ತಿರುಚಿ ಹಾಕುವದು. ಮಾನವ-ನಿರ್ಮಿತ ದೇವಾಲಯವನ್ನು ನಾಶಮಾಡುತ್ತೇನೆಂದು ಯೇಸು ಹೇಳಲಿಲ್ಲ. **69**

**14:69** ಅಂಗಳದಲ್ಲಿದ್ದ ಗಂಪಿನವರೆಲ್ಲರೂ ಪೇತ್ರನ ಬಗ್ಗೆ ಅನುಮಾನಿಸಿದರು, ಮತ್ತು ಕೆಲವರು ಅವನನ್ನು ಪ್ರಶ್ನಿಸಿದರು ಅಥವಾ ಅವನ ಬಗ್ಗೆ ಅಲ್ಲಿದ್ದ ಮತ್ತೊಬ್ಬರೊಂದಿಗೆ ಮಾತಾಡಿದರು – ದಾಸಿಯು (ಎರಡು ಸಾರಿ), ಮತ್ತೊಬ್ಬ ಹುಡುಗಿ (ಮತ್ತಾಯ 26:71),

ಅಲ್ಲಿದ್ದ ಕೆಲವರು (ಲೂಕ 22:58), ಅವನೊಂದಿಗೆ ಬೆಂಕಿಕಾಯಿಸಿಕೊಳ್ಳುತ್ತಿದ್ದವರು ಮತ್ತು ಮುಖ್ಯವಾಗಿ ಮಹಾಯಾಜಕನ ಆಳುಗಳಲ್ಲಿ ಒಬ್ಬನು (ಯೋಹಾನ 18:25-26). ಸುವಾರ್ತೆಯ ಲೇಖಕರು ಇವರಲ್ಲಿ ಕೆಲವರನ್ನು ಉಲ್ಲೇಖಿಸಿದ್ದಾರೆ ಆದರೆ ಎಲ್ಲರನ್ನು ಯಾವ ಲೇಖಕರು ಉಲ್ಲೇಖಿಸಲಿಲ್ಲ ಟಿಪ್ಪಣಿ 4:1-20 ನೋಡಿರಿ.

# 15 1

**15:1** ಮತ್ತಾಯ 27:1-2. ಮತ್ತಾಯನು ಯೂದನ ಆತ್ಮಹತ್ಯೆಯನ್ನು ದಾಖಲಿಸುತ್ತಾನೆ, ಆದರೆ ಮಾರ್ಕನು ಅದನ್ನು ಅಲಕ್ಷಿಸುತ್ತಾನೆ. **2-47**

- **15:2-47** ಮತ್ತಾಯ 27:11-61. **14**

**15:14** ಮತ್ತಾಯ 27:25 ರಲ್ಲಿ ನೋಡಿರಿ ಯೆಹೂದ್ಯರು ಈಗ ಹೇಳಿದ ಭಯಾನಕ ವಿಷಯವನ್ನು ನೋಡಿರಿ. **21**

**15:21** ಸ್ಪಷ್ಟವಾಗಿ ನೋಡುವುದಾದರೆ ಅಲೆಗ್ಸಾಂದ್ರು ಮತ್ತು ರೂಫ ಇವರು ಇಬ್ಬರು ವ್ಯಕ್ತಿಗಳಾಗಿದ್ದರು, ಆ ಕಾಲದಲ್ಲಿ ಈ ಸುವಾರ್ತೆಯನ್ನು ಓದುತ್ತಿದ್ದ ಅನೇಕರಿಗೆ ಇವರು ಯಾರೆಂದು ಗೊತ್ತಿತ್ತು. ನಮಗೆ ಇವರ ವಿಷಯವಾಗಿ ಏನೂ ಗೊತ್ತಿಲ್ಲ. ರೂಫ (ಒಂದು ವೇಳೆ ಇದೇ ವ್ಯಕ್ತಿ) ಯನ್ನು ರೋಮಾ. 16:13ರಲ್ಲಿ ಉಲ್ಲೇಖಿಸಲಾಗಿದೆ. **25**

**15:25** ಮೂರನೆಯ ಜಾವ ಎಂದರೆ ಒಂಬತ್ತು ಗಂಟೆ – ಗ್ರೀಕ್ ನಲ್ಲಿ ಮೂರನೆ ಜಾವ, ಅಂದರೆ ಸೂರ್ಯ ಹುಟ್ಟಿದ ಮೂರು ಗಂಟೆಯ ನಂತರ. **28**

**15:28** *"ದ್ರೋಹಿಗಳೊಂದಿಗೆ ತನ್ನನ್ನು ಎಣಿಸಿಕೊಂಡನು"*– ಯೆಶಾಯ 53:12. ಪರಿಶುದ್ಧನು, ಯಾವ ದೋಷವಿಲ್ಲದ ದೇವಕುಮಾರನು ಪಾಪಿಯಾಗಿ ಪರಿಗಣಿಸಲ್ಪಟ್ಟನು. **37**

**15:37** *"ಮುಗಿಯಿತು"*– ಗ್ರೀಕ್ ಭಾಷೆಯ ಒಂದು ಒಳ್ಳೆಯ ಭಾಷಾಂತರ. ಮತ್ತಾಯನು ಉಪಯೋಗಿಸಿದ "ನನ್ನ ಆತ್ಮವನ್ನು ನಿನಗೆ ಒಪ್ಪಿಸುತ್ತೇನೆ" –ಎಂಬ ಶಬ್ದ ಪ್ರಯೋಗ ಗ್ರೀಕ್ ಭಾಷೆಯಲ್ಲಿ ಅದು ಬೇರೆಯಾಗಿದೆ. **38**

- **15:38** ಮತ್ತಾಯ 27:51. **42**

**15:42** ಸೂರ್ಯಾಸ್ತಮಾನಕ್ಕೆ ಯೆಹೂದ್ಯರ ಸಬ್ಬತ್ ದಿನ ಪ್ರಾರಂಭವಾಗುತ್ತದೆ ಮತ್ತು ಮರುದಿನದ ಸೂರ್ಯಾಸ್ತಮಾನದವರೆಗೂ ಮುಂದುವರಿಯುತ್ತದೆ. ಈ ಸಮಯದಲ್ಲಿ ಯಾವ ಕೆಲಸವನ್ನು ಮಾಡಬಾರದು (ವಿಮೋ 20:8-11 ನೋಡಿರಿ). ಆದ್ದರಿಂದ ಯೋಸೇಫನು ಯೇಸುವಿನ ದೇಹವನ್ನು ಸೂರ್ಯಾಸ್ತಮಾನಕ್ಕೆ ಮುಂಚೆಯೇ ಶಿಲುಬೆಯಿಂದ ಇಳಿಸಿ ಸಮಾಧಿಮಾಡಬೇಕೆಂದಿದ್ದನು. ಇಲ್ಲಿ ಹೇಳಲ್ಪಟ್ಟಿರುವ ಸಬ್ಬತ್ ಸಂದೇಹವಿಲ್ಲದೆ ಏಳು ದಿನದ ಹುಳಿಯಿಲ್ಲದ ರೊಟ್ಟಿಯ ಹಬ್ಬವನ್ನು ಪ್ರಾರಂಭಮಾಡುವ ಒಂದು ವಿಶೇಶವಾದ ಸಬ್ಬತ್ ಆಗಿತ್ತು ಮತ್ತು ಕ್ರಮವಾಗಿ ಶನಿವಾರದಲ್ಲಿ ಬರುವ ಸಬ್ಬತ್ ಆಗಿತ್ತು. ಕೆಲವು ಪಡಿತರು ಯೇಸು ಬುಧವಾರ ಸತ್ತನೆಂದು ಸೂಚಿಸುತ್ತಾರೆ. ಬೇರೆ ಕೆಲವರು ಗುರುವಾರವೆಂದು ಸೂಚಿಸುತ್ತಾರೆ, ಸ್ಪಷ್ಟವಾಗಿ ಒಂದು ವೇಳೆ ಅದು ಸಾಂಪ್ರದಾಯಕವಾಗಿದ್ದರೂ ಆ ದಿನವು ಶುಕ್ರವಾರವಾಗಿರಲಿಲ್ಲ. ಅದು ಹೆಚ್ಚಿನ ಮಹತ್ವದ ಸಂಗತಿಯಲ್ಲ ಮತ್ತು ಅದರವಿಷಯವಾಗಿ ನಾವು ತತ್ವಾತ್ರಕರಾಗಬಾರದು. **43**

**15:43** *"ಹಿರೀ ಸಭೆ"*– ಇದರ ಅರ್ಥ ನ್ಯಾಯಾಲಯ – ಮತ್ತಾಯ 5:22 ರ ಟಿಪ್ಪಣಿ ನೋಡಿರಿ. ಯೇಸುವಿಗೆ ಮರಣದಂಡನೆಯಾಗಬೇಕೆಂದು ಒತ್ತಾಯ ಮಾಡಿದವರಲ್ಲಿ ಯೋಸೇಫನು ಇರಲಿಲ್ಲ (ಲೂಕ 23:51).

*"ದೇವರ ರಾಜ್ಯ"*– ಮತ್ತಾಯ 4:17. **45**

**15:45** ಶಿಲಬೆಗೇರಿಸಿದ ಆರು ಗಂಟೆಗಳಲ್ಲಿ ಯೇಸು ಸತ್ತನು. ಶಿಲುಬೆಗೇರಿಸಲ್ಪಟ್ಟವರು ಕೆಲವೊಮ್ಮೆ ಎರಡು ಅಥವಾ ಮೂರು ದಿನಗಳು ಶೀಲುಬೆಯ ಮೇಲೆ ಜೀವಂತವಾಗಿರುತ್ತಿದ್ದರು. ಆದ್ದರಿಂದ ಯೇಸುವಿನ ದೇಹವನ್ನು ಸಮಾಧಿಮಾಡಲು ಕೊಡುವಾಗ ಆತನು ಸತ್ತಿರುವದನ್ನು ಅವರು ಖಾತರಿಮಾಡಿಕೊಂಡು ನಂತರ ಆತನ ದೇಹವನ್ನು ಕೊಟ್ಟರು. ಆತನು ಸತ್ತಿದ್ದಾನೆಂದು ಯೆಹೂದ್ಯ ನಾಯಕರಿಗೂ ಖಚಿತವಾಗಿತ್ತು – ಮತ್ತಾಯ 27:62-66 ನೋಡಿರಿ.

# 16 1-8

**- 16:1-8** ಮತ್ತಾಯ 28:1-8. **1**

**16:1** ಸಮಾಧಿಮಾಡಲು ದೇಹವನ್ನು ಸಿದ್ದಪಡಿಸುವುದು ಸಾಧಾರಣ ಪದ್ಧತಿಯಾಗಿತ್ತು. ಯೇಸು ಮರಣದಿಂದ ಎದ್ದು ಬರುವನೆಂದು ಈ ಹೆಂಗಸರು ಸ್ಪಷ್ಟವಾಗಿ ನಂಬಿರಲಿಲ್ಲ. **5**

**16:5** ಇವನು ಮನುಷ್ಯನಂತೆ ಪ್ರತ್ಯಕ್ಷನಾದ ದೇವದೂತನು (ಮತ್ತಾಯ 28:2). ದೇವದೂತರ ವಿಷಯವಾಗಿ ಆದಿ 16:7 ನೋಡಿರಿ. **7**

**16:7** ಆತನನ್ನು ಅಲ್ಲಗಳೆದ ಪೇತ್ರನಿಗೆ ಕರ್ತನಾದ ಯೇಸುವಿನಿಂದ ಒಂದು ವಿಶೇಷವಾದ ಸಂದೇಶವಿತ್ತು. ಅವನು ನಿರಾಶನಾಗಬಾರದು ಅಥವಾ ಇನ್ನು ಮುಂದೆ ಆತನ ಶಿಷ್ಯನಲ್ಲ ಎಂದು ಅವನು ತಿಳಿದುಕೊಳ್ಳಬಾರದೆಂದು ಆತನು ಬಯಸಿದನು. ಕರ್ತನು ಬಹಳ ಪ್ರೀತಿಯುಳ್ಳವನು ಮತ್ತು ಬಹಳವಾಗಿ ಪಾಪಮಾಡಿದವರನ್ನು ಪರಿಗಣಿಸುವವನಾಗಿದ್ದಾನೆ. **8**

**16:8** ಇದರ ಅರ್ಥ ಅವರು ಶಿಷ್ಯರಬಳಿಗೆ ಬರುವವರೆಗೂ ಯಾರೊಂದಿಗೂ ಮಾತಾಡಲಿಲ್ಲ (ಮತ್ತಾಯ 28:8; ಲೂಕ 24:9,19). **9-20**

**16:9-20** ಈ ವಚನಗಳು ಮಾರ್ಕನ ಸುವಾರ್ತೆಯ ಮೂಲ ಪ್ರತಿಯಲ್ಲಿರಲಿಲ್ಲವೆಂದು ಆದರೆ ನಂತರದಲ್ಲಿ ಯಾರಿಂದಲೋ ಸೇರಿಸಲ್ಪಟ್ಟಿತೆಂದು ಕೆಲವು ಪಂಡಿತರು ಹೇಳುತ್ತಾರೆ. ಇದು ನಿಜವಾಗಿರಬಹುದು ಯಾಕಂದರೆ ಪುರಾತನ ಹಸ್ತಪ್ರತಿಗಳಲ್ಲಿ ಈ ವಚನಗಳು ಇಲ್ಲ. ಆದರೂ, ಬೇರೆ ಕೆಲವೊಂದರಲ್ಲಿ ಇದೆ, ಮತ್ತು ಸುವಾರ್ತೆಗಳ ಮೂಲಪ್ರತಿಗಳಲ್ಲಿ ಈ ವಚನಗಳು ಇರಲಿಲ್ಲ ಎಂದು ಹೇಳುವದ್ಕಕ್ಕೆ ಯಾವ ಪುರಾವೆಗಳು ಇಲ್ಲ. ಈ ಮುಕ್ತಾಯದ ವಚನಗಳನ್ನು ಮಾರ್ಕನು ಬರೆದನೋ ಅಥವಾ ಬೇರೆಯವರು ಬರೆದರೋ, ಇದನ್ನು ಬರೆಯುವದಕ್ಕೆ ದೇವರಾತ್ಮನು ಪ್ರೇರಿಸಿದನೆಂದು ಈ ವಾಕ್ಯಗಳನ್ನು ದೇವರವಾಕ್ಯದ ಭಾಗವಾಗಿ ಪರಿಗಣಿಸಬೇಕೆಂದು ಈ ಟಿಪ್ಪಣಿಗಳ ಲೇಖಕನು ನಂಬುತ್ತಾನೆ. **9**

**- 16:9** ಯೋಹಾನ 20:11; ಲೂಕ 8:2.. **11**

**16:11** ಈ ಸಾಕ್ಷಿಗಳಿಲ್ಲದಿದ್ದರೂ ಕ್ರಿಸ್ತನು ಪುನುರುತ್ಥಾನ ಹೊಂದಿದನೆಂದು ಅವರು ನಂಬಬೇಕು. ಕ್ರಿಸ್ತನು ತಾನೇ ತಾನು ಮರಣದಿಂದ ಎದ್ದೇಳುವೆನೆಂದು ಹೇಳಿದ್ದನು (9:31; ಮತ್ತಾಯ 16:21; 17:22-23). ಬೇರೆ ಸಾಕ್ಷಿಗಳು ಅವರೊಂದಿಗೆ ಮಾತಾಡಿದಾಗ್ಯೂ, ಅವರು ತಮ್ಮ ಅಪನಂಬಿಕೆಯಲ್ಲಿ ಮುಂದುವರೆದರು (ವ. 12,13. ಲೂಕ 24:13-32 ನೋಡಿರಿ). ಅವರು ಸುಲಭವಾಗಿನಂಬುವ, ಮೂಡನಂಬಿಕೆಯ ಯಾವ ಪುರಾವೆಗಳಿಲ್ಲದಿದ್ದರು ನಂಬುವ ಜನರಲ್ಲವೆಂದು ಗೋಚರಿಸುತ್ತದೆ. **14**

**16:14** *"ಹನ್ನೊಂದು"*– ಇವರು 12 ಮಂದಿ ಶಿಷ್ಯರಲ್ಲಿ ಪ್ರಧಾನವಾದವರು ಇಸ್ಕರಿಯೋತ

ಯೂದನನ್ನು ಬಿಟ್ಟು (ಮತ್ತಾಯ 27:5). ಗಮನಿಸಿ ಈ ಶಿಷ್ಯರು ನಮ್ಮಹಾಗೆಯೇ ರಕ್ತ ಮಾಂಸವುಳ್ಳವರು ಮತ್ತು ಅವರ ತಪ್ಪುಗಳು ಮತ್ತು ಅವರಲ್ಲಿದ್ದ ಅಪನಂಬಿಕೆಯ ಸ್ವಭಾವ ನಮ್ಮೆಲ್ಲರಲ್ಲಿಯೂ ಇದೆ. ಮತ್ತು ಕರ್ತನ ಗದರಿಕೆಯು ನಮಗೆ ಹೇಗೆ ಬೇಕಾಗಿದೆಯೋ ಹಾಗೆಯೇ ಅವರಿಗೂ ಬೇಕಾಗಿತ್ತು. **15**

**16:15** ಈ ಸುವಾರ್ತೆಯನ್ನು 1 ಕೊರಿಂಥ 15:1-8 ರಲ್ಲಿ ವರ್ಣಿಸಲಾಗಿದೆ. ಆತನ ಶಿಷ್ಯರು ಈ ಭೂಲೋಕದಲ್ಲಿರುವವರಿಗೆಲ್ಲರಿಗೂ ಸುವಾರ್ತೆಯನ್ನು ಸಾರಬೇಕೆಂದು (ಆಗಲೂ ಮತ್ತು ಈಗಲೂ) ಕ್ರಿಸ್ತನು ಆಜ್ಞಾಪಿಸುತ್ತಾನೆ-ಮತ್ತಾಯ 28:18-20; ಲೂಕ 24:47-48; ಯೋಹಾನ 20:21; ಅಪೊ 1:8. ಯೇಸು ಎಲ್ಲರಿಗಾಗಿ ಸತ್ತದ್ದರಿಂದ, ಆತನು ಮಾಡಿದ ಕಾರ್ಯವನ್ನು ಎಲ್ಲರೂ ತಿಳಿಯಬೇಕೆಂದು ಆತನು ಅಪೇಕ್ಷಿಸುತ್ತಾನೆ (2 ಕೊರಿಂಥ 5:14-15; 1 ತಿಮೊ 2:6; 1 ಯೋಹಾನ 2:2). ಪ್ರಪಂಚದಲ್ಲಿರುವವರೆಲ್ಲರೂ ಸುವಾರ್ತೆಯನ್ನು ಕೇಳಿಸಿಕೊಳ್ಳುವದಕ್ಕಾಗಿ ಪ್ರತಿಯೊಬ್ಬ ವಿಶ್ವಾಸಿಯೂ ಅವನ ಅಥವಾ ಅವಳ ಕೈಲಾದದ್ದನ್ನು ಮಾಡಬೇಕು. **16**

**16:16** ದೀಕ್ಷಾಸ್ನಾನದ ಬಗ್ಗೆ ಟಿಪ್ಪಣಿ ಮತ್ತಾಯ 3:6. ನಂಬಿಕೆಯ ಮೂಲಕ ರಕ್ಷಣೆ (ಯೋಹಾನ 3:16; 5:24; 6:47; ಅಪೊ 16:31; ರೋಮಾ 1:17; 3:22,25; ಗಲಾ 2:16; ಎಫೆ 2:8-9), ರಕ್ಷಣೆ ಹೊಂದಲು ದೀಕ್ಷಾಸ್ನಾನದ ಅವಶ್ಯವಿಲ್ಲ, ಆದರೆ ಯೇಸು ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಂಡಿರುವವರು ದೀಕ್ಷಾಸ್ನಾನ ಹೊಂದಬೇಕು ಮತ್ತು ಬಹಿರಂಗವಾಗಿ ತಮ್ಮ ನಂಬಿಕೆಯನ್ನು ಒಪ್ಪಿಕೊಳ್ಳಬೇಕು. ಒಬ್ಬ ವ್ಯಕ್ತಿಯು ತಾನು ಕ್ರಿಸ್ತನನ್ನು ನಂಬಿದ್ದೇನೆಂದು ಹೇಳಿ ಮತ್ತು ದೀಕ್ಷಾಸ್ನಾನ ತೆಗೆದುಕೊಳ್ಳಲು ನಿರಾಕರಿಸಿದರೆ ಅವನ ನಂಬಿಕೆಯು ನಿಜವಾದದ್ದಲ್ಲವೆಂದು ನಂಬಲು ಕಾರಣವಿದೆ. ಗಮನಿಸಿ "ದೀಕ್ಷಾಸ್ನಾನವನ್ನು ಹೊಂದದವನಿಗೆ" ತೀರ್ಪಾಗುವುದು ಎಂದು ಯೇಸು ಹೇಳಲಿಲ್ಲ, ಆದರೆ "ನಂಬದವನಿಗೆ" ತೀರ್ಪಾಗುವುದು ಎಂದನು. ಯೋಹಾನ 3:17-18 ಹೋಲಿಸಿ. "ತೀರ್ಪಾಗುವುದು" ಇಲ್ಲಿ ಇದರ ಅರ್ಥ ನರಕಕ್ಕೆ ಹೋಗಲು ತೀರ್ಪಾಗುವುದೆಂದರ್ಥ. **17-18**

**16:17-18** ಇಲ್ಲಿ ಹೇಳಲ್ಪಟ್ಟಿರುವ ಪ್ರತಿಯೊಂದು ಸೂಚಕಕಾರ್ಯಗಳನ್ನು ಮಾಡಲು ಈ ಕೃಪೆಯ ಕಾಲದಲ್ಲಿ ಪ್ರತಿಯೊಬ್ಬ ವಿಶ್ವಾಸಿಗಳಿದಲು ಸಾಧ್ಯ ಎಂದು ಇದರ ಅರ್ಥವಲ್ಲ. ಅನೇಕ ನಿಜ ವಿಶ್ವಾಸಿಗಳು ಈ ರೀತಿಯ ಒಂದು ಸೂಚಕಕಾರ್ಯವನ್ನು ಅನುಭವಿಸಿಲ್ಲವೆಂಬುದು ಸರ್ವಸಾಧಾರಣವಾಗಿದೆ ಮತ್ತು ಈ ವಾಕ್ಯ ಭಾಗವು

ಹೇಳುವದೇನೆಂದರೆ ಅಸಾಧಾರಣ ನಂಬಿಕೆಯುಳ್ಳವರಿಂದ ಅಥವಾ ಇತರ ವಿಶ್ವಾಸಿಗಳಿಗಿಂತಲೂ ಹೆಚ್ಚು ಆತ್ಮೀಕರಾಗಿವವರಿಂದ ಎಂದು ಹೇಳದೆ "ನಂಬುವವರಿಂದ" ಎಂದು ಹೇಳುತ್ತದೆ. ಆದ್ದರಿಂದ ಈ ವಚನಗಳು ಹೇಳುವದೇನಂದರೆ: ಒಟ್ಟಾರೆಯಾಗಿ ವಿಶ್ವಾಸಿಗಳಿಂದ ಆಗುವದು ಅಥವಾ ಯೇಸುವಿನ ಅಪೋಸ್ತಲರಿಂದ ಅವರ ಸೇವೆಯಲ್ಲಿ ಈ ಸೂಚಕ ಕಾರ್ಯಗಳನ್ನು ನೋಡಬಹುದಾಗಿದೆ. ದೆವ್ವವನ್ನು ಓಡಿಸುವುದರ ಬಗ್ಗೆ ಅಪೊ 5:16; 8:7; 16:18; 19:13-16 ನೋಡಿರಿ. ಅನ್ಯಭಾಷೆಯ ಬಗ್ಗೆ ಅಪೊ 2:4; 10:46; 19:6; 1 ಕೊರಿಂಥ 12:10,28,30; 13:1; 14:2-39 ನೋಡಿರಿ. ಹಾವುಗಳ ಬಗ್ಗೆ ಲೂಕ 10:19; ಅಪೊ 28:3-5 (ತಮಗಿರುವ ನಂಬಿಕೆಯನ್ನು ತೋರಿಸಿಕೊಳ್ಳಲು ಯಾರು ಬೇಕಾದರು ಬೇಕೆಂದು ಹಾವುಗಳನ್ನು ಎತ್ತಿಕೊಳ್ಳಬಹುದುದೆಂದು ಇದು ಹೇಳುವುದಿಲ್ಲ. ಮತ್ತಾಯ 4:6-7 ಹೋಲಿಸಿ). ವಿಷಪೂರಿತರಾದವರ ಬಗ್ಗೆ ಹೊಸ ಒಡಂಬಡಿಕೆಯಲ್ಲಿ ಯಾವ ದಾಖಲೆಯು ಇಲ್ಲ. ಆ ಕಾಲದಲ್ಲಿ ವಿಷಪೂರಿತರಾದ ಸಂಗತಿ ನಡೆಯಲಿಲ್ಲ ಎಂದಲ್ಲ ಆದರೆ ಅವುಗಳನ್ನು ದಾಖಲಿಸಿಲ್ಲ. ಕಾಯಿಲೆಯನ್ನು ಸ್ವಸ್ಥ ಮಾಡುವುದರ ಬಗ್ಗೆ ಅಪೊ 28:8-9; ಯಾಕೋಬ 5:14-15 ನೋಡಿರಿ. ಮನುಷ್ಯರು ತಮ್ಮ ಪ್ರಬಲತೆಯನ್ನು ತೋರಿಕೊಳ್ಳಲು ಅಥವಾ ತಮ್ಮ ದೈವಭಕ್ತಿಯನ್ನು ಇತರರಿಗೆ ತೋರಿಸಿಕೊಳ್ಳಲು ಸೂಚಕ ಕಾರ್ಯಗಳನ್ನು ಮಾಡುವ ಶಕ್ತಿಯು ಕೊಡಲ್ಪಡಲಿಲ್ಲವೆಂದು ನಾವು ಅರ್ಥಮಾಡಿಕೊಳ್ಳಬೇಕು. ಇವುಗಳು ದೇವರ ಕೈಯಿಂದ ನಡೆಯುತ್ತದೆಂದು ಮತ್ತು ಅವುಗಳನ್ನು ಮಾಡುವ ಶಕ್ತಿಯನ್ನು ಆತನು ಆರಿಸಿಕೊಳ್ಳುವ ಯಾವ ಸಮಯದಲ್ಲಾದರು, ಯಾವ ಸ್ಥಳದಲ್ಲಿಯಾದರು ಕೊಡಬಹುದು ಅಥವಾ ಅದನ್ನು ಹಿಂತೆಗೆದುಕೊಳ್ಳಬಹುದೆಂಬುದನ್ನು ಸಹ ನಾವು ಅರ್ಥ ಮಾಡಿಕೊಳ್ಳಬೇಕು. ಮಾರ್ಕನ ಸುವಾರ್ತೆಯಲ್ಲಿ ಪಟ್ಟಿಮಾಡಿರುವ ಕೆಲವು ಕಾರ್ಯಗಳನ್ನು ರೋಮಾ 12:6-8 ಮತ್ತು 1 ಕೊರಿಂಥ 12ನೇ ಅಧ್ಯಾಯದಲ್ಲಿ ಪಟ್ಟಿಮಾಡಿರುವ ಆತ್ಮೀಕ ಫಲಗಳಲ್ಲಿ ಕಾಣುವುದಿಲ್ಲ. ಈ ಜಾಗಗಳಲ್ಲಿರುವ ಟಿಪ್ಪಣಿಗಳನ್ನು ನೋಡಿರಿ. **19**

**16:19** ಲೂಕ 24:50-51; ಅಪೊ 1:9-11; ಕೀರ್ತನೆ 110:1. ಬಲಗಡೆಯಲ್ಲಿ ಎಂಬುದು ಗೌರವ ಮತ್ತು ಅಧಿಕಾರದ ಸ್ಥಳವನ್ನು ತೋರಿಸುತ್ತದೆ. ಮತ್ತಾಯ 28:18; ಫಿಲಿಪ್ಪಿ 2:9 ಹೋಲಿಸಿ. **20**

**16:20** ವಚನಗಳು 17,18; ಇಬ್ರಿ 2:4.